ವಿಜಯಪುರ | ಸಂಪುಟ 04 | ಸಂಚಿಕೆ 224 | ಪುಟ 04 | ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಶುಕ್ರವಾರ, ಅಕ್ಟೋಬರ್ 30, 2026

"ಸಿದ್ದರಾಮಯ್ಯನವರನ್ನು ಅತಿ ಹೆಚ್ಚು ಅವಮಾನಿಸಿದವರು, ಮುಖ್ಯಮಂತ್ರಿ ಹುದ್ದೆ ತಪ್ಪಿಸಿದವರು ಯಾರಾದರೂ ಇದ್ದರೆ, ಅದು ಕುಮಾರಸ್ವಾಮಿಯವರು ಮಾತ್ರ. ಇದು ಸ್ಪಷ್ಟವಾಗಿ ಗೋಚರಿಸುವ ಸತ್ಯ. ಸಿದ್ದರಾಮಯ್ಯನವರ ರಾಜಕೀಯ ಜೀವನದುದ್ದಕ್ಕೂ ಎಡೆಬಿಡದೆ ಕಾಡಿದವರು, ಇಂದು ಖರ್ಗೆ ಕುಟುಂಬದ ಕಡೆ ತಿರುಗಿದ್ದಾರೆ."

■ ಪ್ರಿಯಾಂಕ ಖರ್ಗೆ
ಗೃಹ ಸಚಿವರು

ವಿಜಯಪುರ ಜಿಲ್ಲಾ ಮಟ್ಟದ ಯುವ ಸಂಸತ್ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಆನಂದ ಕೆ.

ಯುವಕರು ಸಂವಿಧಾನದ ಅರಿವು ಹೊಂದಿ ನೀತಿ ನಿರೂಪಕರಾಗಿ ಹೊರಹೊಮ್ಮಲಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಯುವಜನರು ಸಂವಿಧಾನದ ಆಶಯಗಳು, ಸಂಸದೀಯ ಕಾರ್ಯಕಲಾಪಗಳು ಹಾಗೂ ಕಾನೂನು ರಚನೆಯ ಪ್ರಕ್ರಿಯೆಯ ಬಗ್ಗೆ ಅರಿವು ಹೊಂದಿ, ಭವಿಷ್ಯದಲ್ಲಿ ಜವಾಬ್ದಾರಿಯುತ ನೀತಿ ನಿರೂಪಕರಾಗಿ ಹೊರಹೊಮ್ಮಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಗುರುವಾರ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವ ಸಂಸತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಯುವ ಸಂಸತ ಮೂಲಕ ಯುವಜನರಿಗೆ ಸಂಸತ್ತಿನ ಮತ್ತು ಶಾಸಕಾಂಗದ ಕಾರ್ಯವಿಧಾನ,ಪ್ರಶ್ನೋತ್ತರ ಕಲಾಪ,ಕಾನೂನುಗಳ ಮಂಡನೆ ಹಾಗೂ ಅವುಗಳ ಕುರಿತು ನಡೆಯುವ ಚರ್ಚೆಗಳ ಬಗ್ಗೆ ಪ್ರಾಯೋಗಿಕ ತಿಳಿವಳಿಕೆ ದೊರೆಯುತ್ತದೆ. ಯಾವುದೇ ವಿಷಯದ ಕುರಿತು ಚರ್ಚೆ ನಡೆಸುವಾಗ ನಿಗದಿತ ನಿಯಮಗಳು ಮತ್ತು ಪ್ರಕ್ರಿಯೆಗಳನ್ನು ಪಾಲನೆ ಸಂಸದೀಯ ವ್ಯವಸ್ಥೆಯ ಮಹತ್ವದ ಜವಾಬ್ದಾರಿಗಳ ಕುರಿತು ಅರಿವು ಹೊಂದಬಹುದಾಗಿದೆ ಎಂದರು.

ಜಿಲ್ಲಾ ಮಟ್ಟದ ಯುವ ಸಂಸತ್ತಿನಲ್ಲಿ ಆಯ್ಕೆಯಾದ ಎಂಟು ಯುವ ಪ್ರತಿನಿಧಿಗಳು ರಾಜ್ಯಮಟ್ಟದ ಯುವ ಸಂಸತ್ ಕಾರ್ಯಕ್ರಮದಲ್ಲಿ ಜಿಲ್ಲೆಯನ್ನು ಪ್ರತಿನಿಧಿಸಲಿದ್ದಾರೆ. ಅವರು ಉತ್ತಮವಾಗಿ ಪಾಲ್ಗೊಂಡು ಸಂಸದೀಯ ಕಾರ್ಯಕಲಾಪಗಳು, ಕಾನೂನುಗಳು ಮತ್ತು ಆಡಳಿತ ವ್ಯವಸ್ಥೆಯ ಕುರಿತು ಹೆಚ್ಚಿನ ಜ್ಞಾನ ಸಂಪಾದಿಸಬೇಕು. ಯುವ ಸಂಸತ್‌ನಂತಹ ಕಾರ್ಯಕ್ರಮಗಳು ಯುವಜನರಲ್ಲಿ ನಾಯಕತ್ವದ ಗುಣ, ಸಂವಹನ ಕೌಶಲ, ಪ್ರಜಾಪ್ರಭುತ್ವದ ಮೌಲ್ಯಗಳ ಅರಿವು ಹಾಗೂ ಜವಾಬ್ದಾರಿಯುತ ನಾಗರಿಕ ಪ್ರಜ್ಞೆಯನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಹೇಶ ಪೋತದಾರ ಪ್ರಾಸ್ತಾವಿಕವಾಗಿ ಮಾತನಾಡಿ, ತಾಲೂಕು ಮಟ್ಟದಲ್ಲಿ ಆಯ್ಕೆಯಾದ ಯುವ ಪ್ರತಿನಿಧಿಗಳು ಜಿಲ್ಲಾ ಮಟ್ಟದ ಯುವ ಸಂಸತ್ತಿನಲ್ಲಿ ಭಾಗವಹಿಸಿದ್ದು, ರಾಜ್ಯಮಟ್ಟಕ್ಕೆ ಆಯ್ಕೆಯಾಗುವ ಪ್ರತಿನಿಧಿಗಳು ಜಿಲ್ಲೆಯನ್ನು ಪ್ರತಿನಿಧಿಸಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಸಂವಿಧಾನದ ಪೀಠಿಕೆಯನ್ನು ಬೋಧಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಮೇಯರ್ ಮಡಿವಾಳಪ್ಪ ಕರಡಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಸಂತ ಹೊನಮೋಡೆ, ಡಿವೈಎಸ್ಪಿ ಉಪಾಸೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೆ.ಎ. ಉಪ್ಪಾರ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಡಿ.ಜೆ. ಬಿರಾದಾರ, ಡಯಟ್ ಪ್ರಾಂಶುಪಾಲ ಎಸ್.ಎಸ್. ಮುಜಾವರ,ಸತೀಶ ಪಾಟೀಲ, ಡಾ. ವಿರೇಶ ಗಬ್ಬೂರ,ಜ್ಯೋತಿ, ಶಿವಾನಂದ ಜಮಾದಾರ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ.ಜೆ. ಇಂಡಿ, ಚೆನ್ನು ಕಟ್ಟಿಮನಿ, ಅಭಿಷೇಕ ಚಕ್ರವರ್ತಿ, ಮಹಾಂತೇಶ ಸಾಸಭಾಳ ಹಾಗೂ ವಿನಾಯಕ ಗುಣಸಾಗರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು. ಸದಾನಂದ ಬಡಿಗೇರ ಕಾರ್ಯಕ್ರಮ ನಿರೂಪಿಸಿದರು.

ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕೋಲ್ಹಾರ ಶುದ್ಧ ಕುಡಿಯುವ ನೀರಿನ ಘಟಕದಿಂದ ನೀರು ಸರಬರಾಜು ಮಾಡುವ ಮುಖ್ಯ ಕೊಳವೆ ಮಾರ್ಗದಲ್ಲಿ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ.

ಕೋಲ್ಹಾರ ಮೂಲ ಸ್ಥಾವರದಿಂದ ಜಲನಗರ ಪಂಪಿನ ಮನೆಯವರೆಗೆ ಅಳವಡಿಸಿರುವ 965/900 ಮಿ.ಮೀ. ವ್ಯಾಸದ ಎಂ.ಎಸ್./ಪಿ. ಎಸ್.ಸಿ. ಮುಖ್ಯ ಏರು ಕೊಳವೆ ಮಾರ್ಗದ ಎಂಟು ಸ್ಥಳಗಳಲ್ಲಿ ಜಲಮಂಡಳಿಯಿಂದ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಲಾಗುತ್ತಿದೆ. ರಾಚಣ್ಣ ಗುಡಿ ಸಮೀಪದ ಚೈನೇಜ್ 2.406 ಕಿ.ಮೀ., ಕೋಲ್ಹಾರ ಸಮೀಪದ 3.225, ಕೋಲ್ಹಾರ ಹತ್ತಿರದ 4.355 ಮತ್ತು 4.860 ಕಿ.ಮೀ., ರೋಣಿಹಾಳ ಕೆನಲ್ ಸಮೀಪದ 9.332 ಮತ್ತು 9.960 ಕಿ.ಮೀ. ಹಾಗೂ ಗರಸಂಗಿ ಹಳ್ಳದ ಸಮೀಪದ 6.200 ಮತ್ತು 6.700 ಕಿ.ಮೀ. ಸ್ಥಳಗಳಲ್ಲಿ ಕಾಮಗಾರಿ ನಡೆಯಲಿದೆ.

ಅ.30 ಹಾಗೂ 31ರಂದು ವಿಜಯಪುರ ನಗರದ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು,ಸಾರ್ವಜನಿಕರು ಜಲಮಂಡಳಿಯೊಂದಿಗೆ ಸಹಕರಿಸುವಂತೆ ಕರ್ನಾಟಕ ನಗರ ನೀರು ಮತ್ತು ಒಳ ಚರಂಡಿಯ ನಿರ್ವಹಣಾ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಪ್ರಕಟಣೆ ತಿಳಿಸಿದೆ.

ತೆರೆದ ಚರಂಡಿಯಿಂದ ಸಾರ್ವಜನಿಕರ ಆರೋಗ್ಯಕ್ಕೆ ಕಂಟಕ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಇಲ್ಲಿನ ಬಸ್ ನಿಲ್ದಾಣದ ಕಾಂಪೌಂಡ್‌ಗೆ ಹೊಂದಿಕೊಂಡಿರುವ ತೆರೆದ ಚರಂಡಿಯು ಸಂಪೂರ್ಣವಾಗಿ ಕಸಕಡ್ಡಿಗಳಿಂದ ತುಂಬಿ ಗಬ್ಬು ವಾಸನೆ ಬೀರುತ್ತಿದ್ದು, ಸಾರ್ವಜನಿಕರ ಆರೋಗ್ಯಕ್ಕೆ ತೀವ್ರ ಕಂಟಕವಾಗಿ ಪರಿಣಮಿಸಿದೆ. ಪ್ರತಿದಿನ ಸಾವಿರಾರು ಪ್ರಯಾಣಿಕರು ಮತ್ತು ಸಾರ್ವಜನಿಕರು ಓಡಾಡುವ ಈ ಮುಖ್ಯ ರಸ್ತೆಯ ಪಕ್ಕದಲ್ಲೇ ಇರುವ ಚರಂಡಿ ದುರಸ್ತಿ ಕಾಣದೆ ನರಕಸದೃಶವಾಗಿದೆ.

ಚರಂಡಿಯಲ್ಲಿ ಪ್ಲಾಸ್ಟಿಕ್ ಬಾಟಲಿಗಳು, ತ್ಯಾಜ್ಯ ವಸ್ತುಗಳು ಬಿದ್ದಿರುವುದರಿಂದ ನೀರಿನ ಸರಾಗ ಹರಿವಿಲ್ಲದೆ ನೀರು ನಿಂತಲ್ಲೇ ನಿಂತು ಕೊಳೆಯುತ್ತಿದೆ. ಇದರಿಂದಾಗಿ ವಿಪರೀತ ಸೊಳ್ಳೆಗಳು ಉತ್ಪತ್ತಿಯಾಗುತ್ತಿದ್ದು, ಮಲೇರಿಯಾ, ಡೆಂಗ್ಯೂನಂತಹ ಮಾರಕ ರೋಗಗಳು ಹರಡುವ ಭೀತಿ ಎದುರಾಗಿದೆ. ಮೂಗು ಮುಚ್ಚಿಕೊಂಡು ಓಡಾಡಬೇಕಾದ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾಯುತ್ತಿದೆ ಅನಾಹುತ !

ಈ ಚರಂಡಿಗೆ ಯಾವುದೇ ಸುರಕ್ಷತಾ ತಡೆಗೋಡೆ ಅಥವಾ ಮುಚ್ಚಳ (ಸ್ಲ್ಯಾಬ್) ಇಲ್ಲದಿರುವುದರಿಂದ ಸಾರ್ವಜನಿಕರು ಅಥವಾ ಶಾಲಾ ಮಕ್ಕಳು ಆಕಸ್ಮಿಕವಾಗಿ ಇದರಲ್ಲಿ ಬೀಳುವ ಸಾಧ್ಯತೆ ಹೆಚ್ಚಾಗಿದೆ. ವಿಶೇಷವಾಗಿ ರಾತ್ರಿ ವೇಳೆಯಲ್ಲಿ ಈ ರಸ್ತೆಯಲ್ಲಿ ಸಂಚರಿಸುವಾಗ ಚರಂಡಿ ಇರುವುದು ಸರಿಯಾಗಿ ಕಾಣಿಸದೆ ವಾಹನ ಸವಾರರು ಮತ್ತು ಪಾದಚಾರಿಗಳು ಅಪಾಯಕ್ಕೆ ಸಿಲುಕುವಂತಾಗಿದೆ.

ಸಾರ್ವಜನಿಕರ ಒತ್ತಾಯ:

ಯಾರಾದರೂ ಚರಂಡಿಗೆ ಬಿದ್ದು ಪ್ರಾಣಾಪಾಯ ಅಥವಾ ದೊಡ್ಡ ಅನಾಹುತ ಸಂಭವಿಸುವ ಮೊದಲೇ ಸಂಬಂಧಪಟ್ಟ ಪುರಸಭೆ ಹಾಗೂ ಬಸ್ ನಿಲ್ದಾಣದ ಅಧಿಕಾರಿಗಳು ಜಂಟಿಯಾಗಿ ಕ್ರಮ ಕೈಗೊಳ್ಳಬೇಕು. ತಕ್ಷಣವೇ ಚರಂಡಿಯಲ್ಲಿರುವ ಕಸವನ್ನು ಸ್ವಚ್ಛಗೊಳಿಸಿ, ಅದಕ್ಕೆ ಸೂಕ್ತ ಮುಚ್ಚಳವನ್ನು ಅಳವಡಿಸುವ ಮೂಲಕ ಸಾರ್ವಜನಿಕರ ಸುರಕ್ಷತೆಗೆ ಆದ್ಯತೆ ನೀಡಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ.

"ಏನಾದರೂ ಅನಾಹುತವಾಗುವ ಮೊದಲೇ ಅಧಿಕಾರಿಗಳು ಎಚ್ಚೆತ್ತು ಚರಂಡಿಯನ್ನು ಮುಚ್ಚಿಸುವ ವ್ಯವಸ್ಥೆ ಮಾಡಬೇಕು. ಒಂದು ವೇಳೆ ಇಲಾಖೆಯ ನಿರ್ಲಕ್ಷ್ಯದಿಂದ ಏನಾದರೂ ಅನಾಹುತ ಸಂಭವಿಸಿದರೆ, ಅದಕ್ಕೆ ನೇರವಾಗಿ ಕೆಎಸ್‌ಆರ್‌ಟಿಸಿ ಮತ್ತು ಪುರಸಭೆ ಆಡಳಿತವೇ ಹೊಣೆಯಾಗಬೇಕಾಗುತ್ತದೆ."

■ ಸುನಿಲಗೌಡ ಬಿರಾದಾರ
ಕರವೇ ಜಿಲ್ಲಾ ಉಪಾಧ್ಯಕ್ಷರು

ರಾಜ್ಯದ ಜನತೆಗೆ ಬಿಗ್ ಶಾಕ್ | ನವೆಂಬರ್ 1 ರಿಂದಲೇ ಜಾರಿ | ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ | ಸಚಿವ ಕೃಷ್ಣಭೈರೇಗೌಡ ಹೇಳಿಕೆ

ನಂದಿನ ಹಾಲಿನ ದರ ಲೀಟರ್‌ಗೆ 8 ರೂ ಹೆಚ್ಚಳ!

ಬೆಂಗಳೂರು: ರಾಜ್ಯ ಸರ್ಕಾರ ರಾಜ್ಯದ ಜನತೆಗೆ ಮತ್ತೊಂದು ದರ ಏರಿಕೆ ಶಾಕ್ ನೀಡಿದ್ದು, ನಂದಿನ ಹಾಲಿನ ದರ ಪ್ರತಿ ಲೀಟರ್‌ಗೆ 8 ರೂಪಾಯಿ ಹೆಚ್ಚಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಗುರುವಾರ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಂದಿನಿ ಹಾಲಿನ ದರವನ್ನು ಪ್ರತಿ ಲೀಟರ್‌ಗೆ 8 ರೂಪಾಯಿ ಹೆಚ್ಚಿಸಲು ನಿರ್ಧರಿಸಲಾಗಿದೆ. ಹೆಚ್ಚಿಗೆ ಮಾಡಲಾಗುವ 8 ರೂಪಾಯಿಯಲ್ಲಿ 7 ರೂಪಾಯಿ ಹಾಲು ಉತ್ಪಾದಕರಿಗೆ ಮತ್ತು 1 ರೂಪಾಯಿ ಕೆಎಂಎಫ್ ಗೆ ನೀಡಲಾಗುವುದು ಮತ್ತು ಪರಿಷ್ಕೃತ ದರ ನವೆಂಬರ್ 1 ರಿಂದಲೇ ಜಾರಿಯಾಗಲಿದೆ ಎಂದು ಸಚಿವ ಕೃಷ್ಣಭೈರೇಗೌಡ ಅವರು ತಿಳಿಸಿದ್ದಾರೆ.

ಇದು ಸರ್ವಾನುಮತದಿಂದ ಕೈಗೊಂಡ ತೀರ್ಮಾನ ಆಗಿದೆ. ಇನ್ನುಂದೆ ರೈತರಿಗೆ 35 ರೂ. ಬದಲು 42 ರೂ. ಲೀಟರ್‌ಗೆ ಸಿಗಲಿದೆ. ಇದರ ಜೊತೆಗೆ ಪ್ರೋತ್ಸಾಹ ಧನ 5 ರೂ. ಸಿಗ್ತಿದೆ. ಒಟ್ಟು 47 ರೂ. ಲೀಟರ್ ಹಾಲಿಗೆ ಇನ್ಮುಂದೆ ರೈತರಿಗೆ ಸಿಗಲಿದೆ ಎಂದು ಮಾಹಿತಿ ನೀಡಿದರು.

ಕಳೆದ ಸಚಿವ ಸಂಪುಟ ಸಭೆಯಲ್ಲಿ ನಂದಿನ ಹಾಲಿನ ದರ ಏರಿಕೆಗೆ ಒಪ್ಪಿಗೆ ನೀಡಲಾಗಿತ್ತು. ಆದರೆ ವಿಧಾನ ಪರಿಷತ್ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಹಿನ್ನೆಲೆಯಲ್ಲಿ ಅಂತಿಮ ನಿರ್ಧಾರವನ್ನು ಮುಖ್ಯಮಂತ್ರಿಗಳ ವಿವೇಚನೆಗೆ ಬಿಡಲಾಗಿತ್ತು. ಇದೀಗ ಚುನಾವಣೆ ಮುಗಿದ ಬೆನ್ನಲ್ಲೇ ರಾಜ್ಯದ ಜನತೆಗೆ ದರ ಏರಿಕೆ ಶಾಕ್ ನೀಡಲಾಗಿದೆ.

ಬಸ್ ಟಿಕೆಟ್ ದರವೂ ಏರಿಕೆ?

ಬೆಂಗಳೂರು: ಕರ್ನಾಟಕದಲ್ಲಿ ನಂದಿನಿ ಹಾಲಿನ ದರ ಏರಿಕೆಯ ಚರ್ಚೆಗಳ ಬೆನ್ನಲ್ಲೇ, ಸಾರಿಗೆ ಬಸ್ ಟಿಕೆಟ್ ದರವನ್ನು ಸಹ ಹೆಚ್ಚಳ ಮಾಡುವ ಕುರಿತು ಸಾರಿಗೆ ಸಚಿವ ಬೈರತಿ ಸುರೇಶ್ ಅವರು ಸುಳಿವು ನೀಡಿದ್ದು, ಬಸ್ ದರ ಪರಿಷ್ಕರಣೆ ಹಾಗೂ ಸಾರಿಗೆ ಸಂಸ್ಥೆಗಳ ಆರ್ಥಿಕ ಸ್ಥಿತಿಗತಿಯ ಅಧ್ಯಯನಕ್ಕಾಗಿ ರಚಿಸಲಾಗಿದ್ದ ಸಮಿತಿಯು ತನ್ನ ವರದಿಯನ್ನು ಒಂದೆರಡು ದಿನದಲ್ಲಿ ಸಲ್ಲಿಸಲಿದ್ದು, ಈ ವರದಿಯ ಆಧಾರದ ಮೇಲೆ ದರ ಏರಿಕೆಯ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ವಿಜಯಪುರದಲ್ಲಿ ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ಪ್ರೊ.ನಾಗರಾಜ್ ಹೇಳಿಕೆ

ಪ್ರಜಾಪ್ರಭುತ್ವದ ರಕ್ಷಣೆಗಾಗಿ ಬಿಜೆಪಿ ದೇಶಾದ್ಯಂತ ಹೋರಾಟ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಭಾರತವು ಪ್ರಜಾಪ್ರಭುತ್ವದ ಮೇಲೆ ಆಳವಾದ ನಂಬಿಕೆ ಇಟ್ಟಿರುವ ದೇಶ, ಸನಾತನ ಧರ್ಮ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಆದರೆ ಕಾಂಗ್ರೆಸ್ ನಂತಹ ಪಕ್ಷಗಳು ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುವಲ್ಲಿ ಷಡ್ಯಂತ್ರ ಮಾಡುತ್ತಿದ್ದು, ಈ ಷಡ್ಯಂತ್ರದ ವಿರುದ್ಧ ಬಿಜೆಪಿ ಸಂಘಟಿತ ಹೋರಾಟ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆ ರಕ್ಷಣೆಯ ಸಂಕಲ್ಪ ಮಾಡಿದೆ ಎಂದು ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷರು ಹಾಗೂ ರಾಜ್ಯಸಭಾ ಸದಸ್ಯ ಪ್ರೊ. ನಾಗರಾಜ್ ಹೇಳಿದರು.

ನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದ ಅವರು,ರಾಹುಲ್ ಗಾಂಧಿ ಅವರು ಬೀದಿಗಳಲ್ಲಿ ಹೋರಾಟ ನಡೆಸುವ ಮೂಲಕ ಅಧಿಕಾರ ಪಡೆಯಲು ಸಾಧ್ಯವಿಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳ ಮೂಲಕ ಜನರ ವಿಶ್ವಾಸ ಗಳಿಸಿ, ಬಹುಮತದ ಆಧಾರದ ಮೇಲೆಯೇ ಅಧಿಕಾರ ಪಡೆಯಬೇಕು, ಅದನ್ನು ಬಿಟ್ಟು ಬೀದಿಗಳಲ್ಲಿ ಅರಾಜಕತೆ ಸೃಷ್ಟಿಸಿ ಅಧಿಕಾರ ಬದಲಾವಣೆ ತರುವುದಾದರೆ ಅದು ಸಾಧ್ಯವಿಲ್ಲ ಎಂದರು.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಷ್ಟು ಸುಲಭವಾಗಿ ಅಲುಗಾಡಿಸಲು ಸಾಧ್ಯವಿಲ್ಲ. ದೇಶದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಕರೆಯ ಮೇರೆಗೆ ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಅರಾಜಕತೆಯ ವಿರುದ್ಧ ಬಿಜೆಪಿ ಕಾರ್ಯಕರ್ತರು ಹೋರಾಟ ನಡೆಸಬೇಕಿದೆ ಎಂದು ತಿಳಿಸಿದರು.ಅಕ್ಟೋಬರ್ 23ರಿಂದ ನವೆಂಬರ್ 5ರವರೆಗೆ ದೇಶಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗಿದೆ. ವಿಭಾಗೀಯ ಕೇಂದ್ರಗಳಲ್ಲಿ ಸಾವಿರಾರು ಕಾರ್ಯಕರ್ತರು ಪ್ರತಿಭಟನೆ ನಡೆಸುವ ಮೂಲಕ ಪ್ರಜಾಪ್ರಭುತ್ವದ ರಕ್ಷಣೆಯ ಸಂದೇಶವನ್ನು ತಲುಪಿಸಬೇಕು. ರಾಹುಲ್ ಗಾಂಧಿ ಅವರ ಹೇಳಿಕೆಗಳ ಕುರಿತು ವಾಸ್ತವಾಂಶಗಳನ್ನು ಜನರ ಮುಂದಿಡುವ ಕೆಲಸವನ್ನು ಬಿಜೆಪಿ ಕಾರ್ಯಕರ್ತರು ಮಾಡಬೇಕು ಎಂದು ಕರೆ ನೀಡಿದರು.

ವಿಜಯಪುರ ಸಂಸದ ರಮೇಶ ಜಿಗಜಿಣಗಿ ಮಾತನಾಡಿ, ಸಂಸದರಾದ ರಮೇಶ್ ಜಿಗಜಿಣಗಿ ಅವರು ಮಾತನಾಡಿ, ಕಾರ್ಯಕರ್ತರೇ ನಮ್ಮ ಪಕ್ಷದ ನಿಜವಾದ ಶಕ್ತಿ ಮತ್ತು ಆಸ್ತಿ, ಕಾರ್ಯಕರ್ತರಿಲ್ಲದೆ ನಾವು ಯಾರೂ ಅಲ್ಲ. ಪಕ್ಷದ ಸಂಘಟನೆಯ ಬಲವೇ ಕಾರ್ಯಕರ್ತರು. ಪಕ್ಷವನ್ನು ತಳಮಟ್ಟದಿಂದ ಬಲಪಡಿಸುವಲ್ಲಿ ಕಾರ್ಯಕರ್ತರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕಾರ್ಯಕರ್ತರ ಪರಿಶ್ರಮ, ಸಮರ್ಪಣೆ ಮತ್ತು ನಿಷ್ಠೆಯಿಂದಲೇ ಪಕ್ಷ ಸಂಘಟನೆ ಸದೃಢವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಕಾರ್ಯಕರ್ತರನ್ನು ಗೌರವದಿಂದ ಕಾಣಬೇಕು ಹಾಗೂ ಅವರ ಶ್ರಮವನ್ನು ಗುರುತಿಸಬೇಕು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿ, ದೇಶದ ಶ್ರೇಷ್ಠ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುತ್ತಿರುವ ಕಾಂಗ್ರೆಸ್ ಮೊದಲಾದ ಶಕ್ತಿಗಳ ಪ್ರಯತ್ನವನ್ನು ಬಿಜೆಪಿ ಕಾರ್ಯಕರ್ತರು ವಿಫಲಗೊಳಿಸಬೇಕು ಎಂದರು.

ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ, ಮಹಾಪೌರ ಎಂ.ಎಸ್. ಕರಡಿ, ಕಾಸುಗೌಡ ಬಿರಾದಾರ, ಸಂಜು ಐಹೊಳೆ, ಉಮೇಶ ಕಾರಜೋಳ, ಚಂದ್ರಶೇಖರ ಕೌಟಗಿ, ಸಾಬು ಮಾಶಾಳ, ಸಂದೀಪ್ ಪಾಟೀಲ, ಕೃಷ್ಣ ಗೊನಾಳಕರ, ರಜನಿ ಸಂಬಣ್ಣಿ, ಭಾರತಿ ಬೂಯರ್ ಪಾಪು ಸಿಂಗ್ ರಜಪೂತ ಸೇರಿದಂತೆ ಬಿಜೆಪಿ ನಾಯಕರು, ಮಹಾನಗರ ಪಾಲಿಕೆ ಸದಸ್ಯರು, ಪಕ್ಷದ ಎಲ್ಲಾ ಮಂಡಲಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

ಮುಳವಾಡ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ "ಉದಯರಶ್ಮಿ" ದಿನಪತ್ರಿಕೆಯ ಸಂಪಾದಕ ಇಂದುಶೇಖರ ಮಣೂರ ಅಭಿಮತ

ಭ್ರಷ್ಟಾಚಾರ ದೇಶದ ಅಭಿವೃದ್ಧಿಗೆ ಮಾರಕವಾದ ಪಿಡುಗು

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಕ್ಕಳಿಗೆ ಬಾಲ್ಯದಲ್ಲಿಯೇ ಆಸೆ-ಆಮಿಷಗಳನ್ನೊಡ್ಡಿಪಾಲಕರುಕೆಲಸಮಾಡಿಸಿಕೊಳ್ಳುವುದಕ್ಕೆ ಮುಂದಾಗುವುದು ಭ್ರಷ್ಟಾಚಾರದ ಮುನ್ನುಡಿ ಎಂದು ವಿಜಯಪುರ ಸಹಾಯಕ ಕೃಷಿ ನಿರ್ದೇಶಕ (ಕೇಂದ್ರ) ಶಿವನಗೌಡ ಪಾಟೀಲ ಹೇಳಿದರು.

ಜಿಲ್ಲೆಯ ಮುಳವಾಡ ಗ್ರಾಮದ ಕನ್ನಡ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆಯಲ್ಲಿ ಮದ್ರಾಸ್ ಫರ್ಟಿಲೈಸರ್ಸ್ ಲಿಮಿಟೆಡ್ ಪ್ರಾಂತೀಯ ಕಾರ್ಯಾಲಯ ಬಳ್ಳಾರಿ ಹಮ್ಮಿಕೊಂಡಿರುವ ಭ್ರಷ್ಟಾಚಾರದ ವಿರುದ್ಧ ಜಾಗೃತಿ ಅರಿವು ಸಪ್ತಾಹ "ಗ್ರಾಮ ಸಭೆ" ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಕೃಷಿ ಇಲಾಖೆಯ ವಿವಿಧ ಯೋಜನೆಗಳು ಮತ್ತು ಸೌಲಭ್ಯಗಳ ಕುರಿತು ಶಿವನಗೌಡ ಗ್ರಾಮಸ್ಥರಿಗೆ ವಿವರಿಸಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ "ಉದಯರಶ್ಮಿ" ದಿನಪತ್ರಿಕೆಯ ಸಂಪಾದಕ ಇಂದುಶೇಖರ ಮಣೂರ ಮಾತನಾಡಿ, ಭ್ರಷ್ಟಾಚಾರವೆಂಬುದು ದೇಶದ ಅಭಿವೃದ್ಧಿಗೆ ಮಾರಕವಾಗಿರುವ ಸಾಮಾಜಿಕ ಪಿಡುಗು. ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣವಾಗಬೇಕಾದರೆ ಮೊದಲು ನಮ್ಮ ಮನಸ್ಸು ಮತ್ತು ನಡೆ ಪ್ರಾಮಾಣಿಕವಾಗಿರಬೇಕು. ಬದಲಾವಣೆ ನಮ್ಮಿಂದಲೇ ಆರಂಭವಾಗಲಿ ಎಂದು ಕರೆ ನೀಡಿದರು.

ಎಂಎಫ್‌ಎಲ್ ಪ್ರಾಂತೀಯ ಮಾಜಿ ವ್ಯವಸ್ಥಾಪಕ ಹಾಗೂ ಮಾಹೂರಿ ಅಗ್ರಿ ಕ್ಲಿನಿಕ್ ಮಾಲಿಕ ಡಿ.ಎಸ್. ದೇಶಪಾಂಡೆ ಮಾತನಾಡಿ,ಎಂಎಫ್‌ಎಲ್ ಸಂಸ್ಥೆ ಪ್ರತಿವರ್ಷ ಇಂತಹ ಸಮಾಜಮುಖಿ ಕಾರ್ಯಗಳನ್ನು ಹಮ್ಮಿಕೊಳ್ಳುವ ಮೂಲಕ ಸಾಮಾಜಿಕ ಜವಾಬ್ದಾರಿ ಮೆರೆಯುತ್ತಿದೆ. ಮಕ್ಕಳು ನಾಳಿನ ಜವಾಬ್ದಾರಿಯುತ ನಾಗರಿಕರು. ವಿದ್ಯಾರ್ಥಿಗಳಲ್ಲಿ ಬಾಲ್ಯದಿಂದಲೇ ಪ್ರಾಮಾಣಿಕತೆ ಮತ್ತು ನೈತಿಕತೆಯ ಅರಿವು ಮೂಡಿಸುವುದು ಅತ್ಯಂತ ಅಗತ್ಯ. ಅದಕ್ಕಾಗಿ ಅವರ ಸಮ್ಮುಖದಲ್ಲಿ ಈ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಹೇಳಿದರು.

ಮನಗೂಳಿ ಕ್ರೈಂ ಪಿಎಸೈ ಗುರುಬೆಟ್ಟಿ ಅವರು, ಭ್ರಷ್ಟಾಚಾರ ನಿರ್ಮೂಲನೆಗಾಗಿ ಪ್ರತಿಜ್ಞೆ ವಿಧಿ ಭೋದಿಸಿದರು.

ಎಂಎಫ್‌ಎಲ್ ಬೆಂಗಳೂರಿನ ಮುಖ್ಯ ವ್ಯವಸ್ಥಾಪಕ ಉಮಾಶಂಕರ ನಾಯ್ಡು ಮತ್ತು ಎಂಎಫ್‌ಎಲ್ ವಿಜಯಪುರ ಹೆಚ್ಚುವರಿ ವ್ಯವಸ್ಥಾಪಕ ಬಸವರಾಜ ಪಾಟೀಲ ಪ್ರಾಸ್ತಾವಿಕ ಮಾತನಾಡಿದರು.

ಎಪಿಎಂಸಿ ನಿವೃತ್ತ ಅಧಿಕಾರಿ ಎಲ್.ಎ.ಶಿಂಧೆ, ತಾಲೂಕು ಕೃಷಿಕ ಸಮಾಜ ಅಧ್ಯಕ್ಷ ಎಸ್.ಆರ್.ಪಾಟೀಲ, ಕೃಷಿ ಇಲಾಖೆಯ ಕೃಷ್ಣಾ ತೆಲಗಿ ಮಾತನಾಡಿದರು.

ಮುಳವಾಡದ ಗಣ್ಯರಾದ ಎ.ಎಸ್.ಐಹೊಳ್ಳಿ, ಎ.ಜಿ.ಕಳಸಗೊಂಡ, ಬಸಲಿಂಗಪ್ಪ ಗೊಳಸಂಗಿ, ಎಸ್.ಬಿ.ಐಹೊಳ್ಳಿ, ಎಸ್.ಎಸ್.ಬೀಳಗಿ, ವೆಂಕನಗೌಡ ಪಾಟೀಲ, ಶಿವಪ್ಪ ಕಳಸಗೊಂಡ, ಎಲ್.ಎಂ.ಹಂಚಿನಾಳ, ಕೌಸರಬಾನು ಗೋಡ್ಯಾಳ ಮತ್ತು ಶಾಲಾ ಮುಖ್ಯ ಗುರು ಎಂ.ಐ.ಉಣ್ಣಿಬಾವಿ ವೇದಿಕೆ ಮೇಲಿದ್ದರು.

ಶಿಕ್ಷಕ ಸಿ.ಎಂ.ಕೆಂಗನಾಳ ನಿರೂಪಿಸಿದರು. ಎಂಎಫ್‌ಎಲ್ ೕ ವ್ಯವಸ್ಥಾಪಕ ಜಿ.ಬಿ.ಪಾಟೀಲ ವಂದಿಸಿದರು.

ಭ್ರಷ್ಟಾಚಾರ ವಿರುದ್ಧ ರ್‍ಯಾಲಿ

ಕಾರ್ಯಕ್ರಮಕ್ಕೂ ಮುನ್ನ ಶಾಲಾ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಹಾಗೂ ಎಂಎಫ್‌ಎಲ್ ಅಧಿಕಾರಿಗಳು ಜೊತೆಗೂಡಿ, ಭ್ರಷ್ಟಾಚಾರ ವಿರುದ್ಧ ಘೋಷಣೆಗಳನ್ನು ಕೂಗುತ್ತ, ಫಲಕಗಳನ್ನು ಪ್ರದರ್ಶಿಸುತ್ತ ಗ್ರಾಮದ ಪ್ರಮುಖ ರಸ್ತೆಗಳ ಮೂಲಕ ಸಾಗಿ ಕಾರ್ಯಕ್ರಮ ಸ್ಥಳಕ್ಕೆ ಆಗಮಿಸಿದರು.

ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ

ಇದೇ ವೇಳೆ ಭ್ರಷ್ಟಾಚಾರ ವಿಷಯ ಕುರಿತ ರಸಪ್ರಶ್ನೆ ಸ್ಪರ್ಧೆ ಹಾಗೂ ರಂಗೋಲಿ ಸ್ಪರ್ಧೆಗಳಲ್ಲಿ ಮೊದಲ ಮೂರು ಸ್ಥಾನ ಪಡೆದ ವಿದ್ಯಾರ್ಥಿನಿಯರಿಗೆ ಬಹುಮಾನ



" ಭ್ರಷ್ಟಾಚಾರವನ್ನು ತೊಡೆದುಹಾಕುವುದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ; ಅದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು. ನಾವು ಲಂಚ ನೀಡುವುದಿಲ್ಲ, ಲಂಚ ಪಡೆಯುವುದಿಲ್ಲಎಂಬದೃಢಸಂಕಲ್ಪ ಮಾಡಬೇಕು. ಎಲ್ಲ ಕೆಲಸಗಳಲ್ಲಿಯೂ ಪ್ರಾಮಾಣಿಕತೆ, ಪಾರದರ್ಶಕತೆ ಮತ್ತು ನೈತಿಕ ಮೌಲ್ಯಗಳಿಗೆ ಆದ್ಯತೆ ನೀಡಬೇಕು. ಭ್ರಷ್ಟಾಚಾರ ಕಂಡುಬಂದಾಗ ಸೂಕ್ತ ಕಾನೂನುಬದ್ಧ ಮಾರ್ಗಗಳ ಮೂಲಕ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡುವ ಧೈರ್ಯವನ್ನೂ ಬೆಳೆಸಿಕೊಳ್ಳಬೇಕು."

■ ಇಂದುಶೇಖರ ಮಣೂರ
ಜಿಲ್ಲಾ ಪ್ರಧಾನ ಕಾರ್ಯದರ್ಶಿ
ಕಾರ್ಯನಿರತ ಪತ್ರಕರ್ತರ ಸಂಘ, ವಿಜಯಪುರ
ಹಾಗೂ "ಉದಯರಶ್ಮಿ" ದಿನಪತ್ರಿಕೆಯ
ಸಂಪಾದಕ

ಡಿಪಿಡಿಪಿ ಕಾಯ್ದೆ ಕಸರತ್ತು: ಸರ್ಕಾರದ ಕೈಯಲ್ಲಿ ಕಾನೂನಿನ ಕತ್ತರಿ

ಆಕಾಶ ರೋಡಗಿ.
ಶಿವೂರ – ಅಫಜಲಪುರ
ಕಲಬುರ್ಗಿ ಜಿಲ್ಲೆ

ಪತ್ರಿಕೋದ್ಯಮಕ್ಕೆ ಸ್ವಾತಂತ್ರ್ಯ ಬೇಕು, ಸರ್ಕಾರಕ್ಕೆ ಗೌಪ್ಯತೆ ಬೇಕು, ಜನರಿಗೆ ಸತ್ಯ ಬೇಕು. ಒಂದು ಕಡೆ ತನಿಖಾ ಪತ್ರಿಕೋದ್ಯಮದ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವ ಆತಂಕ; ಮತ್ತೊಂದು ಕಡೆ ಪತ್ರಿಕೋದ್ಯಮದ ಹೆಸರಿನಲ್ಲಿ ಖಾಸಗಿತನಕ್ಕೆ ಧಕ್ಕೆ ತರುವ ಅಪಾಯ. ಸರ್ಕಾರ ಮತ್ತು ಮಾಧ್ಯಮದ ನಡುವಿನ ಈ ಹಗ್ಗಜಗ್ಗಾಟದಲ್ಲಿ ಪ್ರಜಾಪ್ರಭುತ್ವದ ಕುತ್ತಿಗೆ ಮಾತ್ರ ಸಿಕ್ಕಿಹಾಕಿಕೊಳ್ಳಬಾರದು. ಸರ್ಕಾರವನ್ನು ಪ್ರಶ್ನಿಸಿದರೆ ಅಸಮಾಧಾನ, ಮಾಧ್ಯಮವನ್ನು ಪ್ರಶ್ನಿಸಿದರೆ ಅಭಿವ್ಯಕ್ತಿ ಸ್ವಾತಂತ್ರ್ಯದ ನೆನಪಿಸುವಿಕೆ! ಇವೆರಡರ ನಡುವೆ ಸಾಮಾನ್ಯ ನಾಗರಿಕನಿಗೆ ಉಳಿಯುವುದೇನು? ಇದೇ ಪ್ರಶ್ನೆಯನ್ನು ಭಾರತದ ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಕಾಯ್ದೆಯ ವಿವಾದ ಮತ್ತೆ ಮುನ್ನೆಲೆಗೆ ತಂದಿದೆ.

■ **ಉದಯರಶ್ಮಿ ದಿನಪತ್ರಿಕೆ**

ಅಕ್ಟೋಬರ್ 27ರಂದು ಡಿಜಿಟಲ್ ನ್ಯೂಸ್ ಪಬ್ಲಿಷರ್ಸ್ ಅಸೋಸಿಯೇಷನ್ ಸಲ್ಲಿಸಿದ ಅರ್ಜಿಯ ವಿಚಾರವಾಗಿ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿದೆ. ದಿ ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್, ಇಂಡಿಯಾ ಟುಡೇ, ಟೈಮ್ಸ್ ಗ್ರೂಪ್, ಝೀ, ಎನ್‌ಡಿಟಿವಿ ಮತ್ತು ನೆಟ್‌ವರ್ಕ್ 18 ಸೇರಿದಂತೆ 21 ಸುದ್ದಿ ಸಂಸ್ಥೆಗಳ ಡಿಜಿಟಲ್ ವಿಭಾಗಗಳನ್ನು ಪ್ರತಿನಿಧಿಸುವ ಈ ಸಂಘಟನೆ ಕಾಯ್ದೆಯ ಕೆಲವು ನಿಬಂಧನೆಗಳನ್ನು ಪ್ರಶ್ನಿಸಿದೆ. ಮುಂದಿನ ವಿಚಾರಣೆ ನವೆಂಬರ್ 17ಕ್ಕೆ ನಿಗದಿಯಾಗಿದೆ. ನ್ಯಾಯಾಲಯ ನೋಟಿಸ್ ನೀಡಿರುವುದೇ ಅರ್ಜಿದಾರರ ವಾದವನ್ನು ಒಪ್ಪಿಕೊಂಡಂತಲ್ಲ; ಕಾಯ್ದೆಗೆ ಮಧ್ಯಂತರ ತಡೆಯೂ ನೀಡಿಲ್ಲ. ಇದು ಗಮನಿಸಬೇಕಾದ ಕಾನೂನು ವಾಸ್ತವ.

ಹಾಗಾದರೆ, ಈ ವಿವಾದದಲ್ಲಿ ತಪ್ಪು ಯಾರದ್ದು? ಸರ್ಕಾರದ್ದೇ, ಮಾಧ್ಯಮದ್ದೇ? ಎರಡೂ ಕಡೆಯವರ ವಾದಗಳನ್ನು ಪರಿಶೀಲಿಸದೆ ತೀರ್ಪು ನೀಡುವುದು ಸುಲಭ. ಆದರೆ ಪ್ರಜಾಪ್ರಭುತ್ವಕ್ಕೆ ಬೇಕಾಗಿರುವುದು ಸುಲಭದ ತೀರ್ಪಲ್ಲ, ಸಾಕ್ಷ್ಯಾಧಾರಗಳ ಮೇಲಿನ ವಿಶ್ಲೇಷಣೆ.

ಸರ್ಕಾರದ ತಪ್ಪು: ಖಾಸಗಿತನದ ಹೆಸರಿನಲ್ಲಿ ಸಾರ್ವಜನಿಕ ಹಿತಕ್ಕೆ ಬೀಗ ಹಾಕಬೇಡಿ!

2023ರ ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಕಾಯ್ದೆಯ ಉದ್ದೇಶ ನಾಗರಿಕರ ವೈಯಕ್ತಿಕ ಡಿಜಿಟಲ್ ಮಾಹಿತಿಯನ್ನು ರಕ್ಷಿಸುವುದು. ಈ ಉದ್ದೇಶವನ್ನು ವಿರೋಧಿಸುವ ಅಗತ್ಯವಿಲ್ಲ.

ವ್ಯಕ್ತಿಯ ಖಾಸಗಿ ಮಾಹಿತಿಯನ್ನು ಅನುಮತಿಯಿಲ್ಲದೆ ದುರುಪಯೋಗಪಡಿಸಿಕೊಳ್ಳುವುದಕ್ಕೆ ಕಡಿವಾಣ ಹಾಕಲೇಬೇಕು. ಆದರೆ ಒಳ್ಳೆಯ ಉದ್ದೇಶವಿರುವ ಕಾನೂನಿನಲ್ಲಿಯೂ ಅಸ್ಪಷ್ಟತೆ ಇದ್ದರೆ, ಅದರ ಪರಿಣಾಮ ಗಂಭೀರವಾಗಬಹುದು.

ಇಲ್ಲಿರುವ ಮುಖ್ಯ ಆತಂಕ ಪತ್ರಿಕೋದ್ಯಮಕ್ಕೆ ಸ್ಪಷ್ಟವಾದ ಪ್ರತ್ಯೇಕ ವಿನಾಯಿತಿ ಇಲ್ಲದಿರುವುದು. ಭ್ರಷ್ಟಾಚಾರ, ಅಧಿಕಾರ ದುರ್ಬಳಕೆ, ಸಾರ್ವಜನಿಕ ಹಣದ ವ್ಯಯ ಮತ್ತು ಆಡಳಿತಾತ್ಮಕ ಅಕ್ರಮಗಳ ಕುರಿತು ತನಿಖೆ ನಡೆಸುವಾಗ ಪತ್ರಕರ್ತರು ವೈಯಕ್ತಿಕ ಮಾಹಿತಿಯನ್ನೂ ಪರಿಶೀಲಿಸಬೇಕಾಗುತ್ತದೆ. ಪ್ರತಿಯೊಂದು ಸಂದರ್ಭದಲ್ಲೂ ಸಂಬಂಧಪಟ್ಟ ವ್ಯಕ್ತಿಯ ಒಪ್ಪಿಗೆಯನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ಬಂದರೆ ತನಿಖೆಯ ಗುರಿಯಾಗಿರುವವರೇ ತನಿಖೆಗೆ ಅಡ್ಡಿಯಾಗುವ ಸಾಧ್ಯತೆಯಿದೆ ಎಂಬುದು ಪ್ರಕಾಶಕರ ವಾದ.

ಒಂದು ಉದಾಹರಣೆ ನೋಡೋಣ. ಸಾರ್ವಜನಿಕ ಹಣದ ದುರುಪಯೋಗದ ಬಗ್ಗೆ ದಾಖಲೆಗಳನ್ನು ಪರಿಶೀಲಿಸುವ ಪತ್ರಕರ್ತನಿಗೆ ಸಂಬಂಧಪಟ್ಟ ಅಧಿಕಾರಿಯ ಒಪ್ಪಿಗೆಯೇ ಅಡ್ಡಿಯಾಗಬೇಕಾದರೆ ತನಿಖೆಯ ಸ್ವಾತಂತ್ರ್ಯ ಎಲ್ಲಿ ಉಳಿಯುತ್ತದೆ? ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವವರ ಅನುಮತಿ ಪಡೆದು ಅವರ ವಿರುದ್ಧ ತನಿಖೆ ನಡೆಸಬೇಕಾದ ಪರಿಸ್ಥಿತಿ ಬಂದರೆ ಅದು ಪತ್ರಿಕೋದ್ಯಮವಲ್ಲ, ಅನುಮತಿ ಪತ್ರದ ಕಚೇರಿಯಾಗುತ್ತದೆ!

ಆದರೆ ಇಲ್ಲಿ ಒಂದು ಸ್ಪಷ್ಟನೆ ಅಗತ್ಯ. ಕಾಯ್ದೆಯ ಪ್ರತಿಯೊಂದು ನಿಬಂಧನೆಯೂ ಪತ್ರಿಕೋದ್ಯಮವನ್ನು ನೇರವಾಗಿ ನಿಷೇಧಿಸುತ್ತದೆ ಎಂದು ಹೇಳಲಾಗದು. ಅದರ ಅನುಷ್ಠಾನ ಹೇಗಿರುತ್ತದೆ? ಯಾವ ಸಂದರ್ಭಗಳಲ್ಲಿ ಯಾವ ನಿಯಮ ಅನ್ವಯಿಸುತ್ತದೆ ಎಂಬುದೂ ಮುಖ್ಯ. ಆದರೂ ತನಿಖಾ ಪತ್ರಿಕೋದ್ಯಮಕ್ಕೆ ಸೂಕ್ತ ರಕ್ಷಣೆ ಮತ್ತು ಅಧಿಕಾರಗಳ ದುರುಪಯೋಗಕ್ಕೆ ಸ್ಪಷ್ಟ ಮಿತಿ ಇರಬೇಕೆಂಬ ಪ್ರಶ್ನೆಯನ್ನು ನಿರ್ಲಕ್ಷಿಸಲಾಗದು.



ಇನ್ನೊಂದು ಗಂಭೀರ ವಿಷಯ ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ 8(1)(ರಿ). ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 44(3) ಈ ನಿಬಂಧನೆಯನ್ನು ಬದಲಿಸಿದೆ. ಹಿಂದಿನ ನಿಬಂಧನೆಯಲ್ಲಿ ದೊಡ್ಡ ಸಾರ್ವಜನಿಕ ಹಿತದ ಆಧಾರದ ಮೇಲೆ ವೈಯಕ್ತಿಕ ಮಾಹಿತಿಯನ್ನು ಬಹಿರಂಗಪಡಿಸಲು ಅವಕಾಶವಿತ್ತು. ಹೊಸ ಪದಪ್ರಯೋಗದ ಪರಿಣಾಮವಾಗಿ ಮಾಹಿತಿ ಹಕ್ಕಿನ ವ್ಯಾಪ್ತಿ ಕುಗ್ಗಬಹುದೆಂಬ ಆತಂಕ ವ್ಯಕ್ತವಾಗಿದೆ.

ಇಲ್ಲಿ ಸರ್ಕಾರ ಉತ್ತರಿಸಬೇಕಾದ ಪ್ರಶ್ನೆ ಸರಳವಾಗಿದೆ. ಸಾರ್ವಜನಿಕ ಹಣದ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳಲ್ಲಿ ವ್ಯಕ್ತಿಯ ಹೆಸರು ಅಥವಾ ವೈಯಕ್ತಿಕ ವಿವರಗಳಿವೆ ಎಂಬ ಕಾರಣಕ್ಕೆ ಅವುಗಳನ್ನು ಸಂಪೂರ್ಣವಾಗಿ ಮುಚ್ಚಿಡಬಹುದೇ? ಖಾಸಗಿತನದ ಹಕ್ಕು ಮುಖ್ಯವೇ ಸರಿ. ಆದರೆ ಸಾರ್ವಜನಿಕ ಹುದ್ದೆಯಲ್ಲಿರುವವರ ಅಧಿಕೃತ ಕರ್ತವ್ಯ, ಸಾರ್ವಜನಿಕ ಹಣದ ಬಳಕೆ ಮತ್ತು ಆಡಳಿತಾತ್ಮಕ ನಿರ್ಧಾರಗಳ ಪರಿಶೀಲನೆಯೂ ಅಷ್ಟೇ ಮುಖ್ಯ.

ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಯ ಖಾಸಗಿ ಜೀವನವನ್ನು ಸಾರ್ವಜನಿಕಗೊಳಿಸುವುದು ಸರಿಯಲ್ಲ. ಅದೇ ರೀತಿ, ಸಾರ್ವಜನಿಕ ಹಿತಕ್ಕೆ ಸಂಬಂಧಿಸಿದ ದಾಖಲೆಗಳನ್ನು ವೈಯಕ್ತಿಕ ಮಾಹಿತಿಯ ಹೆಸರಿನಲ್ಲಿ ಮುಚ್ಚಿಡುವುದೂ ಸರಿಯಲ್ಲ. ಸರ್ಕಾರ ಮಾಡಬೇಕಾದದ್ದು ಈ ಎರಡರ ನಡುವಿನ ಗೆರೆಯನ್ನು ಸ್ಪಷ್ಟಪಡಿಸುವುದು. ಮಾತಿನ ಭರವಸೆಗಿಂತ ಕಾನೂನಿನಲ್ಲಿನ ಸ್ಪಷ್ಟತೆಯೇ ನಾಗರಿಕರ ಹಕ್ಕುಗಳಿಗೆ ನಿಜವಾದ ರಕ್ಷಣೆ.

ಮಾಧ್ಯಮದ ತಪ್ಪು: ಸ್ವಾತಂತ್ರ್ಯ ಬೇಕು, ಆದರೆ ಲೆಕ್ಕ ಕೇಳುವವರು ಬೇಡವೇ?

ಸರ್ಕಾರದ ನಿಲುವನ್ನು ಪ್ರಶ್ನಿಸುವಾಗ ಮಾಧ್ಯಮದ ತಪ್ಪುಗಳನ್ನು ಮರೆಮಾಚುವ ಅಗತ್ಯವಿಲ್ಲ. ಪತ್ರಿಕೋದ್ಯಮ ಪ್ರಜಾಪ್ರಭುತ್ವದ ಕಾವಲುಗಾರ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಕಾವಲುಗಾರನ ಕೆಲಸವನ್ನು ಪರಿಶೀಲಿಸುವ ವ್ಯವಸ್ಥೆಯೂ ಇರಬೇಕಲ್ಲವೇ?

ಕೆಲವು ಮಾಧ್ಯಮ ಸಂಸ್ಥೆಗಳಲ್ಲಿ ಆರೋಪವೇ ಸುದ್ದಿಯಾಗುತ್ತದೆ; ಸತ್ಯಾಸತ್ಯತೆ ಪರಿಶೀಲಿಸುವ ಹೊತ್ತಿಗೆ ಸಾರ್ವಜನಿಕ ಅಭಿಪ್ರಾಯ ರೂಪುಗೊಂಡಿರುತ್ತದೆ. ರಾಜಕೀಯ ನಾಯಕರ ವಿರುದ್ಧದ ಆರೋಪವನ್ನು ದೊಡ್ಡ ಅಕ್ಷರಗಳಲ್ಲಿ ಪ್ರಕಟಿಸಿ, ನಂತರ ಅದು ತಪ್ಪೆಂದು ತಿಳಿದಾಗ ಸಣ್ಣ ಕ್ಷಮಾಪಣೆಯೊಂದಿಗೆ ಮುಗಿಸುವ ಪದ್ಧತಿ ಓದುಗರಿಗೆ ಮಾಡುವ ಅನ್ಯಾಯವಲ್ಲವೇ?

ಒಂದು ಪಕ್ಷದ ನಾಯಕನ ತಪ್ಪನ್ನು ಗಂಟೆಗಟ್ಟಲೆ ಚರ್ಚಿಸುವ ವಾಹಿನಿ, ತನ್ನನ್ನು ಬೆಂಬಲಿಸುವ ಪಕ್ಷದ ವಿರುದ್ಧದ ಪ್ರಶ್ನೆ ಬಂದಾಗ ಮೌನವಾಗಿದ್ದರೆ ಅದನ್ನು ಪತ್ರಿಕೋದ್ಯಮವೆನ್ನಬೇಕೇ, ರಾಜಕೀಯ ಪ್ರಚಾರವೆನ್ನಬೇಕೇ?

ಈ ಪ್ರಶ್ನೆ ಎಡಪಂಥೀಯ ಅಥವಾ ಬಲಪಂಥೀಯ ಮಾಧ್ಯಮಗಳಿಗೆ ಮಾತ್ರ ಸೀಮಿತವಲ್ಲ. ಎಲ್ಲರಿಗೂ ಅನ್ವಯಿಸುತ್ತದೆ. ಅಧಿಕಾರದಲ್ಲಿರುವವರನ್ನು ಹೊಗಳುವುದೇ ದೇಶಪ್ರೇಮವಲ್ಲ; ಅಧಿಕಾರದಲ್ಲಿರುವವರನ್ನು ಟೀಕಿಸುವುದೇ ದೇಶದ್ರೋಹವೂ ಅಲ್ಲ. ಆದರೆ ಟೀಕೆಯ ಹೆಸರಿನಲ್ಲಿ ಪರಿಶೀಲಿಸದ ಆರೋಪಗಳನ್ನು ಹರಡುವುದೂ ಪತ್ರಿಕೋದ್ಯಮವಲ್ಲ.

ಇಲ್ಲಿ ಡಿಜಿಟಲ್ ನ್ಯೂಸ್ ಪಬ್ಲಿಷರ್ಸ್ ಅಸೋಸಿಯೇಷನ್ ಮುಂದಿರುವ ಸವಾಲು ಸ್ಪಷ್ಟವಾಗಿದೆ. ಮಾಧ್ಯಮಕ್ಕೆ ಕಾನೂನಿನ ರಕ್ಷಣೆ ಬೇಕಾದರೆ, ತನ್ನ ಹೊಣೆಗಾರಿಕೆಯನ್ನು ತೋರಿಸುವ ವ್ಯವಸ್ಥೆಯನ್ನೂ ಬಲಪಡಿಸಬೇಕು. ತಪ್ಪು ಸುದ್ದಿಗೆ ಸಮಯೋಚಿತ ತಿದ್ದುಪಡಿ, ಮೂಲ ವರದಿಯಷ್ಟೇ ಗೋಚರಿಸುವ ಕ್ಷಮಾಪಣೆ, ದೂರುಗಳಿಗೆ ಸ್ವತಂತ್ರ ಪರಿಹಾರ ಮತ್ತು ತನಿಖಾ ವರದಿಗಳಲ್ಲಿ ಸಾಕ್ಷ್ಯಾಧಾರಗಳ ಸ್ಪಷ್ಟತೆ ಇರಬೇಕಲ್ಲವೇ?

ಸರ್ಕಾರದ ನೇರ ನಿಯಂತ್ರಣಕ್ಕೆ ಒಳಗಾಗದ ಸ್ವತಂತ್ರ ವ್ಯವಸ್ಥೆ ಬೇಕೆಂಬುದು ಸಮಂಜಸವಾದ ಬೇಡಿಕೆ. ಆದರೆ ಸ್ವತಂತ್ರ ವ್ಯವಸ್ಥೆ ಎಂದರೆ ನಿಯಂತ್ರಣವೇ ಇಲ್ಲದ ವ್ಯವಸ್ಥೆಯಲ್ಲ. ಜನರ ವಿಶ್ವಾಸವೇ ಮಾಧ್ಯಮದ ನಿಜವಾದ ಬಂಡವಾಳ. ಆ ವಿಶ್ವಾಸ ಕಳೆದುಕೊಂಡು ಸ್ವಾತಂತ್ರ್ಯದ ಬಗ್ಗೆ ಭಾಷಣ ಮಾಡಿದರೆ ಪ್ರಯೋಜನವೇನು?

ನ್ಯಾಯಾಲಯದ ಪ್ರಶ್ನೆ: ಮಾಧ್ಯಮವೇ ತನ್ನ ಹೊಣೆಗಾರಿಕೆಯನ್ನು ವಿವರಿಸಲಿ!

ಈ ವಿವಾದದ ಕಾನೂನು ಚರ್ಚೆಯ ಕೇಂದ್ರದಲ್ಲಿ ಎರಡು ಹಕ್ಕುಗಳಿವೆ. ಒಂದು ವ್ಯಕ್ತಿಯ ಖಾಸಗಿತನ; ಮತ್ತೊಂದು ಅಭಿವ್ಯಕ್ತಿ ಮತ್ತು ಪತ್ರಿಕಾ ಸ್ವಾತಂತ್ರ್ಯ. ಎರಡೂ ಪ್ರಜಾಪ್ರಭುತ್ವಕ್ಕೆ ಅಗತ್ಯ. ಒಂದನ್ನು ರಕ್ಷಿಸುವ ಹೆಸರಿನಲ್ಲಿ ಮತ್ತೊಂದನ್ನು ದುರ್ಬಲಗೊಳಿಸುವುದು ಸರಿಯಾದ ಮಾರ್ಗವಲ್ಲ.

ಪತ್ರಕರ್ತರ ಮಾಹಿತಿ ಮೂಲಗಳ ಗೌಪ್ಯತೆ ತನಿಖಾ ಪತ್ರಿಕೋದ್ಯಮಕ್ಕೆ ಅತ್ಯಂತ ಮುಖ್ಯ. ಭ್ರಷ್ಟಾಚಾರ ಅಥವಾ ಆಡಳಿತಾತ್ಮಕ ಅಕ್ರಮಗಳ ಬಗ್ಗೆ ಮಾಹಿತಿ ನೀಡುವ ವ್ಯಕ್ತಿಯ ಗುರುತು ಅನಗತ್ಯವಾಗಿ ಬಹಿರಂಗವಾದರೆ, ಮುಂದಿನವರು ಮಾಹಿತಿ ನೀಡಲು ಹಿಂಜರಿಯಬಹುದು. ಆದರೆ ಮೂಲಗಳ ರಕ್ಷಣೆಯ ಹೆಸರಿನಲ್ಲಿ ಪರಿಶೀಲನೆಯಿಲ್ಲದ ಮಾಹಿತಿಯನ್ನು ಪ್ರಕಟಿಸುವುದಕ್ಕೂ ಅವಕಾಶ ನೀಡಲಾಗದು.

ಅದೇ ರೀತಿ, ಖಾಸಗಿತನವನ್ನು ರಕ್ಷಿಸುವುದು ಮತ್ತು ಅಧಿಕಾರಿಗಳ ವಿರುದ್ಧದ ಸಾಕ್ಷ್ಯಗಳನ್ನು ಮುಚ್ಚಿಡುವುದು ಒಂದೇ ಅಲ್ಲ. ಕಾನೂನು ಈ ವ್ಯತ್ಯಾಸವನ್ನು ಗುರುತಿಸಬೇಕು.

ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಯ ಮಹತ್ವವೂ ಇದೇ. ಮಾಧ್ಯಮಕ್ಕೆ ಸಂಪೂರ್ಣ ವಿನಾಯಿತಿ ನೀಡಬೇಕೇ ಎಂಬುದಷ್ಟೇ ಪ್ರಶ್ನೆಯಲ್ಲ; ತನಿಖಾ ಪತ್ರಿಕೋದ್ಯಮಕ್ಕೆ ಅಗತ್ಯವಾದ ರಕ್ಷಣೆ ಯಾವುದು, ನಾಗರಿಕರ ಖಾಸಗಿತನಕ್ಕೆ ಧಕ್ಕೆ ಬಾರದಂತೆ ಯಾವ ನಿಯಂತ್ರಣಗಳು ಬೇಕು ಎಂಬುದನ್ನೂ ನಿರ್ಧರಿಸಬೇಕಿದೆ.

ಕೊನೆಯ ಮಾತು: ಇಬ್ಬರೂ ಕನ್ನಡಿಯ ಮುಂದೆ ನಿಲ್ಲಲಿ!

ಸರ್ಕಾರಕ್ಕೆ ಒಂದು ಪ್ರಶ್ನೆ: ನೀವು ಖಾಸಗಿತನವನ್ನು ರಕ್ಷಿಸುತ್ತಿದ್ದೀರೋ, ಅಥವಾ ನಿಮ್ಮನ್ನು ಪ್ರಶ್ನಿಸುವವರ ಕೈ ಕಟ್ಟುವ ಅಪಾಯಕ್ಕೆ ಅವಕಾಶ ನೀಡುತ್ತಿದ್ದೀರೋ?

ಮಾಧ್ಯಮಕ್ಕೆ ಮತ್ತೊಂದು ಪ್ರಶ್ನೆ: ನೀವು ಜನರ ಪರವಾಗಿ ಹೋರಾಡುತ್ತಿದ್ದೀರೋ, ಅಥವಾ ನಿಮ್ಮ ತಪ್ಪುಗಳಿಗೆ ಉತ್ತರಿಸಬೇಕಾಗದ ವಿಶೇಷ ಸ್ಥಾನಮಾನ ಕೇಳುತ್ತಿದ್ದೀರೋ?

ಸರ್ಕಾರ ಕಾನೂನಿನಲ್ಲಿನ ಅಸ್ಪಷ್ಟತೆಗಳನ್ನು ನಿವಾರಿಸಬೇಕು. ಸಾರ್ವಜನಿಕ ಹಿತದ ತನಿಖೆ ನಡೆಸಲು ಪತ್ರಿಕೋದ್ಯಮಕ್ಕೆ ಅಗತ್ಯ ರಕ್ಷಣೆ ಒದಗಿಸಬೇಕು. ವೈಯಕ್ತಿಕ ಮಾಹಿತಿಯ ದುರುಪಯೋಗವನ್ನು ತಡೆಯುವ ಜೊತೆಗೆ, ಮಾಹಿತಿ ಹಕ್ಕಿನ ಮೂಲಕ ಬಹಿರಂಗಪಡಿಸಬೇಕಾದ ಸಾರ್ವಜನಿಕ ದಾಖಲೆಗಳು ಅನಗತ್ಯವಾಗಿ ಮುಚ್ಚಿಹೋಗದಂತೆ ಸೂಕ್ತ ರಕ್ಷಣೆಯನ್ನೂ ರೂಪಿಸಬೇಕು.

ಮಾಧ್ಯಮವೂ ತನ್ನೊಳಗಿನ ಪಕ್ಷಪಾತ, ಪರಿಶೀಲನೆಯಿಲ್ಲದ ಆರೋಪ, ತಿದ್ದುಪಡಿಯ ನಿರ್ಲಕ್ಷ್ಯ ಮತ್ತು ವ್ಯಾಪಾರಿಕ ಒತ್ತಡಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ತಪ್ಪು ಮಾಡಿದ ಪತ್ರಕರ್ತನನ್ನು ಪ್ರಶ್ನಿಸುವುದು ಪತ್ರಿಕಾ ಸ್ವಾತಂತ್ರ್ಯದ ವಿರೋಧವಲ್ಲ. ತಪ್ಪು ವರದಿಯ ವಿರುದ್ಧ ನ್ಯಾಯ ಕೇಳುವುದೂ ಪತ್ರಿಕೋದ್ಯಮದ ವಿರುದ್ಧದ ಸಂಚು ಎಂದರ್ಥವಲ್ಲ.

ಸರ್ಕಾರಕ್ಕೆ ಸ್ವಾತಂತ್ರ್ಯವಿಲ್ಲದ ಮಾಧ್ಯಮ ಬೇಕಾಗಬಾರದು; ಮಾಧ್ಯಮಕ್ಕೂ ಹೊಣೆಗಾರಿಕೆಯಿಲ್ಲದ ಸ್ವಾತಂತ್ರ್ಯ ಬೇಕಾಗಬಾರದು. ಜನರಿಗೆ ಬೇಕಾಗಿರುವುದು ಸರ್ಕಾರದ ಜಾಹೀರಾತು ಪತ್ರಿಕೆಯೂ ಅಲ್ಲ, ಪಕ್ಷದ ಪ್ರಚಾರ ವಾಹಿನಿಯೂ ಅಲ್ಲ. ಅಧಿಕಾರವನ್ನು ಪ್ರಶ್ನಿಸುವ, ಸಾಕ್ಷ್ಯಾಧಾರಗಳೊಂದಿಗೆ ವರದಿ ಮಾಡುವ ಮತ್ತು ತನ್ನ ತಪ್ಪನ್ನೂ ಒಪ್ಪಿಕೊಳ್ಳುವ ಸ್ವತಂತ್ರ ಮಾಧ್ಯಮ.

ಕೊನೆಗೆ ಒಂದು ವ್ಯಂಗ್ಯ ಮಾತ್ರ ಉಳಿಯುತ್ತದೆ. ಸರ್ಕಾರ ಹೇಳುತ್ತದೆ, "ನಿಮ್ಮ ವೈಯಕ್ತಿಕ ಮಾಹಿತಿ ಸುರಕ್ಷಿತವಾಗಿರಲಿ." ಮಾಧ್ಯಮ ಹೇಳುತ್ತದೆ, "ನಮ್ಮ ಸ್ವಾತಂತ್ರ್ಯ ಸುರಕ್ಷಿತವಾಗಿರಲಿ." ಆದರೆ ಈ ಇಬ್ಬರ ಜಗಳದಲ್ಲಿ ಜನರ ಮಾಹಿತಿ ಹಕ್ಕು ಸುರಕ್ಷಿತವಾಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸುವವರು ಯಾರು?

ಸ್ವಾತಂತ್ರ್ಯಕ್ಕೆ ಹೊಣೆಗಾರಿಕೆಯ ಬ್ರೇಕ್ ಬೇಕು; ಆದರೆ ಆ ಬ್ರೇಕ್ ಹಾಕುವ ಕೈ ಅಧಿಕಾರದ ಕೈಯಲ್ಲೇ ಇರಬಾರದು. ಅದೇ ಪ್ರಜಾಪ್ರಭುತ್ವದ ನಿಜವಾದ ಪರೀಕ್ಷೆ.

ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆ

■ **ಬಿಜಾಪುರ ವಾರ್ತಾ**

ಕಲಬುರಗಿ :ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಯವರು ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಎಸ್ ಬಿ ಆರ್ ಪಿ ಯು ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಬಾಲಕರ ಕಬ್ಬಡ್ಡಿಯಲ್ಲಿ ಪ್ರಥಮ ಸ್ಥಾನ ಹಾಗೂ ಬಾಲಕಿಯರ ವಾಲಿಬಾಲನಲ್ಲಿ ದ್ವಿತೀಯ ಸ್ಥಾನ ಪಡೆಯುವುದರ ಮೂಲಕ ರಾಜ್ಯ ಮಟ್ಟಕ್ಕೆ ಆಯ್ಕೆಗಿರುತ್ತಾರೆ.

ಬಾಲಕರ ಕಬಡ್ಡಿಯಲ್ಲಿ ಸಿದ್ದಲಿಂಗ, ಚಂದ್ರಕಾಂತ, ನಾಗನಾಥ, ವೈಭವ, ಆದರ್ಶ, ವರುಣಕುಮಾರ. ಬಾಲಕಿಯರ ವಾಲಿಬಾಲ್ ಪಂದ್ಯದಲ್ಲಿ ರುತುಜಾ, ಸುಶ್ಮಿತಾ, ವಿನುತಾ, ಅಕ್ಷರಾ, ಸಾಕ್ಷಿ, ಪೂಜಾ, ಶ್ರೇಯಾ, ಮತ್ತು ರುಚಿಕಾ ಹಾಗೂ ಅಥ್ಲೆಟಿಕ್ಸ್ ಕ್ರೀಡೆ ತ್ರಿವಿಧ ಜಿಗಿತದಲ್ಲಿ ವರುಣ400 ಮೀಟರ್ ಓಟದಲ್ಲಿ ಪ್ರಮೋದ. ಎತ್ತರ ಜಿಗಿತದಲ್ಲಿ ಶ್ರೀಕರ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಪೂಜ್ಯ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವಾಜಿ, 9ನೇ ಪೀಠಾಧಿಪತಿಗಳಾದ ಪೂಜ್ಯ ಚಿರಂಜೀವಿ ದೊಡ್ಡಪ್ಪ ಅಪ್ಪಾ ಶುಭಹಾರೈಸಿ ಆಶೀರ್ವದಿಸಿದ್ದಾರೆ. ಸಂಸ್ಥೆಯ ಕಾರ್ಯದರ್ಶಿ ಬಸವರಾಜ್ ದೇಶಮುಖ ಅವರು ಹಾಗೂ ಪ್ರಾಚಾರ್ಯರಾದ ಎನ್ ಎಸ್ ದೇವರಕಲ್ ಅವರು ಶುಭಕೋರಿ ಅಭಿನಂದಿಸಿದ್ದಾರೆ. ಕಾಲೇಜಿನ ಮೇಲ್ವಿಚಾರಕರು ಹಾಗೂ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳ ಸಾಧನೆಯನ್ನು ಕಂಡು ಹರ್ಷ ವ್ಯಕ್ತಪಡಿಸಿದ್ದಾರೆ. ವಿಜೇತ ವಿದ್ಯಾರ್ಥಿಗಳೊಂದಿಗೆ ದೈಹಿಕ ಶಿಕ್ಷಕ ನಾಗರಾಜ ಗುತ್ತೇದಾರ, ರಾಜು ಸದ್ಲಾಪುರ, ಸಿದ್ರಾಮ ಚಿತ್ರದಲ್ಲಿದ್ದಾರೆ.

ಬಿಜೆಪಿ ಉಳುವಿಗಾಗಿ ಅಶೋಕ್ ಚಿಂತಿಸಲಿ: ಜಗದೇವ ಗುತ್ತೇದಾರ

■ **ಬಿಜಾಪುರ ವಾರ್ತಾ**

ಕಲಬುರಗಿ : ಮತ ಕಳ್ಳತನ ಮೂಲಕ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಮುಂಬರುವ 2028 ಚುನಾವಣೆಯಲ್ಲಿ ಹೀನಾಯವಾಗಿ ಸೋಲುವ ಮೂಲಕ ಜನಮಾನಸದಿಂದ ಮರೆಯಾಗಲಿದೆ. ಆ ಬಗ್ಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಚಿಂತಿಸಲಿ ಎಂದು ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ ತಿರುಗೇಟು ನೀಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಕಾಂಗ್ರೆಸ್ ಮುಗಿಸಲು ಎಐಸಿಸಿ ಅಧ್ಯಕ್ಷರು ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಜ್ಯದ ಗೃಹ ಸಚಿವ ಪ್ರಿಯಾಂಕ ಖರ್ಗೆ ಸಾಕು ಎಂದಿರುವ ಆರ್. ಅಶೋಕ ಅವರ ಹೇಳಿಕೆಯನ್ನು ತೀವ್ರವಾಗಿ ಖಂಡಿಸುವ ಮೂಲಕ ತಿರುಗೇಟು ನೀಡಿದ್ದಾರೆ. ಆರ್. ಅಶೋಕ ಅವರು ಫಿನೆಲ್ ಮತ್ತು ಹಾರ್ಪಿಕ್ ಹಾಕಿ ಮಲ್ಲಿಕಾರ್ಜುನ ಖರ್ಗೆಯವರಿಗೆ ತೊಳೆಯಬೇಕು ಎಂದಿರುವದು ಖಂಡನೀಯ. ಹಿರಿಯ ಅನುಭವಿ ರಾಜಕಾರಣಿ ಕುರಿತು ಇಂತಹ ಕೀಳುಮಟ್ಟದ ಶಬ್ದಗಳು ಉಪಯೋಗಿಸಿ ಮಾತನಾಡುವ ಆರ್. ಅಶೋಕ ಅವರಿಗೆ ಮೊದಲು ಫಿನೆಲ್ ಮತ್ತು ಹಾರ್ಪಿಕ್ ಹಾಕಿ ತೊಳೆಯಬೇಕು ಎಂದಿದ್ದಾರೆ.

1.21 ಲಕ್ಷ ರೂ.ಮೌಲ್ಯದ ಗಾಂಜಾ ಜಪ್ತಿ

■ **ಬಿಜಾಪುರ ವಾರ್ತಾ**

ಕಲಬುರಗಿ:ನಗರದ ರೋಜಾ (ಬಿ)ಯ ಸೈಯದ್ ಗಲ್ಲಿಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ರೋಜಾ ಪೊಲೀಸ್ ಠಾಣೆ ಪಿಐ ದಿಲೀಪಕುಮಾರ ಸಾಗರ, ಸಿಬ್ಬಂದಿಗಳಾದ ಶಿವಕುಮಾರ, ಯಲ್ಲಪ್ಪ, ಮಹಿಳಾ ಪೇದೆ ಅಂಬಿಕಾ ಅವರು ದಾಳಿ ನಡೆಸಿ ಸೈಯದ್ ಗಲ್ಲಿಯ ಮೊಹಮ್ಮದ್ ಅಲ್ತಾಫ್ ಎಂಬಾತನನ್ನು ಬಂಧಿಸಿ 1.21 ಲಕ್ಷ ರೂ.ಮೌಲ್ಯದ 1.210 ಕೆ.ಜಿ.ತೂಕದ ಗಾಂಜಾ ಜಪ್ತಿ ಮಾಡಿದ್ದಾರೆ. ರೋಜಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈತರ ನೆರವಿಗೆ ಬರಲಾಗದಿದ್ದರೆ ರಾಜೀನಾಮೆ ಕೊಡಿ: ದೇಸಾಯಿ ಕಲ್ಲೂರ ಆಗ್ರಹ

■ **ಬಿಜಾಪುರ ವಾರ್ತಾ**

ಕಲಬುರಗಿ: ರಾಜ್ಯದಲ್ಲಿ ಮಳೆಯ ಕೊರತೆಯಿಂದ ಬರದ ಛಾಯೆ ಆವರಿಸಿರುವ ಈ ಸಂದರ್ಭದಲ್ಲಿ ರೈತರ ನೆರವಿಗೆ ಧಾವಿಸಬೇಕಾದ ಸರ್ಕಾರ, ರೈತರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ವಿಫಲವಾಗಿರುವುದು ಖಂಡನೀಯ ಎಂದು ಬಿಜೆಪಿ ಓಬಿಸಿ ಮೋರ್ಚಾದ ನಗರಾಧ್ಯಕ್ಷ ದೇವೇಂದ್ರ ದೇಸಾಯಿ ಕಲ್ಲೂರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ರೈತರೊಂದಿಗೆ ಸಭೆ ನಡೆಸಿದ ಸಂದರ್ಭದಲ್ಲಿ, ರೈತರಿಗೆ ಹಣ ನೀಡಲು ಸಾಧ್ಯವಿಲ್ಲ ಎಂದು ಮಾನ್ಯ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿರುವುದು ಸರಿಯಲ್ಲ. ರೈತರ ಬೆನ್ನಿಗೆ ಸರ್ಕಾರವಿದೆ ಎಂದು ಹೇಳಿ, ಸಂಕಷ್ಟದ ಸಮಯದಲ್ಲಿ ರೈತರ ಕೈಬಿಡುವುದು ಅವರಿಗೆ ಮಾಡುವ ಅನ್ಯಾಯ ವಾಗಿದೆ. ರೈತರ ನೆರವಿಗೆ



ಬರಲು ಸಾಧ್ಯವಾಗ ದಿದ್ದರೆ ಅಧಿಕಾರಕ್ಕೆ ರಾಜೀನಾಮೆ ನೀಡಿ ಹೊರನಡೆಯಬೇಕು ಎಂದು ದೇವೇಂದ್ರ ದೇಸಾಯಿ ಕಲ್ಲೂರ ಆಗ್ರಹಿಸಿದ್ದಾರೆ.ರಾಜ್ಯದಲ್ಲಿ ಹಲವು ದಿನಗಳಿಂದ ಕಬ್ಬು ಬೆಳೆಗಾರರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ನಡೆಸುತ್ತಿದ್ದಾರೆ. ಆದರೆ, ರೈತರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ ಪರಿಹಾರ ಕಂಡುಕೊಳ್ಳಬೇಕಾದ ಸರ್ಕಾರ ನಿರ್ಲಕ್ಷ್ಯ ವಹಿಸಿರುವುದು ಖಂಡನೀಯವಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಹಣ ವಿನಿಯೋಗಿಸುವ ಸರ್ಕಾರ, ರೈತರ ಸಂಕಷ್ಟದ ಸಂದರ್ಭದಲ್ಲಿ ಹಣದ ಕೊರತೆಯ ನೆಪ ಹೇಳುತ್ತಿರುವುದು ಸರಿಯಲ್ಲ ಎಂದು ಟೀಕಿಸಿದ್ದಾರೆ. ರಾಜ್ಯದ ಕಾಂಗ್ರೆಸ್ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡಿ ತೋರಿಸುವುದು ಸರಿಯಲ್ಲ. ರೈತರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿದೆ. ರೈತರಿಗೆ ನೆರವು ನೀಡಲು ಅಗತ್ಯ ಹಣಕಾಸಿನ ವ್ಯವಸ್ಥೆ ಮಾಡಿ, ಕಬ್ಬು ಬೆಳೆಗಾರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದ್ದಾರೆ.

"ರೈತರು ಉಳಿದರೆ ದೇಶ ಉಳಿಯುತ್ತದೆ" ಎಂಬ ಮಾತು ಕೇವಲ ಭಾಷಣಗಳಿಗೆ ಸೀಮಿತವಾಗಬಾರದು. ರೈತರಿಗೆ ನ್ಯಾಯಯುತ ಬೆಲೆ, ಸೂಕ್ತ ಪರಿಹಾರ ಹಾಗೂ ಅಗತ್ಯ ನೆರವು ಒದಗಿಸುವ ಮೂಲಕ ಸರ್ಕಾರ ತನ್ನ ಬದ್ಧತೆಯನ್ನು ಸಾಬೀತುಪಡಿಸಬೇಕು. ರೈತರ ನೆರವಿಗೆ ಬರಲು ಸಾಧ್ಯವಾಗದಿದ್ದರೆ ಅಧಿಕಾರದಲ್ಲಿ ಮುಂದುವರಿಯುವ ಬದಲು ರಾಜೀನಾಮೆ ನೀಡಿ ಹೊರನಡೆಯಲಿ ಎಂದು ದೇವೇಂದ್ರ ದೇಸಾಯಿ ಕಲ್ಲೂರ ಆಗ್ರಹಿಸಿದ್ದಾರೆ.

ಕೆ.ಎಸ್.ಆರ್.ಪಿ 6ನೇ ಪಡೆಯಿಂದ ಪೊಲೀಸ್ ಬ್ಯಾಂಡ ತಂಡದ ಪ್ರದರ್ಶನ

■ **ಬಿಜಾಪುರ ವಾರ್ತಾ**

ಕಲಬುರಗಿ: ಡಿ.ಜಿ ಮತ್ತು ಐ.ಜಿ.ಪಿ ಕರ್ನಾಟಕ ರಾಜ್ಯ ರವರ ಮಾರ್ಗದರ್ಶನದ ಮೇರೆಗೆ ಪೊಲೀಸ್ ಹುತಾತ್ಮರ ದಿನಾಚಾರಣೆ–2026 ಅಂಗವಾಗಿ ಕಲಬುರಗಿ ನಗರದ ಸಾವ9ಜನಿಕ ಸ್ಥಳಗಳಲ್ಲಿ 6ನೇ ಪಡೆ ಕೆ.ಎಸ್.ಆರ್.ಪಿ ಕಲಬುರಗಿ ಪೊಲೀಸ್ ಬ್ಯಾಂಡ ತಂಡದಿಂದ ಸಂಜೆ ವಿವಿಧ ಹಾಡುಗಳನ್ನು ಬಾರಿಸುವ ಮೂಲಕ ಪ್ರದರ್ಶನ ಕೈಗೊಳ್ಳಲಾಯಿತು. ಇಲ್ಲಿನ ಜಗತ್ ವೃತ್ತ ಹಾಗೂ ತಾಜಸುಲ್ತಾನಪುರ ಪ್ರದೇಶದಲ್ಲಿ ಪ್ರತ್ಯೇಕವಾಗಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಕಮಾಂಡೆಂಟ್ ಎನ್,ಎಸ್,ಪ್ರಕಾಶ್, ಡೆಪ್ಯೂಟಿ ಕಮಾಂಡೆಂಟ್ ಚನ್ನಬಸವ ಹಾಗೂ ಸಹಾಯಕ ಕಮಾಂಡೆಂರವರು ಹಾಗೂ ಅಧಿಕಾರಿಗಳು, ಸಿಬ್ಬಂದಿಗಳು ಭಾಗವಹಿಸಿದರು.

ಉದ್ಯೋಗ ಮತ್ತು ಕುಟುಂಬಗಳ ನಿರ್ವಹಣೆಗೆ ಬೇಕು ಇಚ್ಛಾಶಕ್ತಿ

ಸಂತೋಷ್ ರಾವ್. ಪೆರ್ಮುಡ.
ಪಟ್ರಮೆ ಗ್ರಾಮ & ಅಂಚೆ,
ಬೆಳ್ತಂಗಡಿ ತಾಲೂಕು – ದ.ಕ ಜಿಲ್ಲೆ

■ ಉದಯರಶ್ಮಿ ದಿನಪತ್ರಿಕೆ

'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಮಾತು ಬಹುವಾಗಿ ಪ್ರಚಲಿತದಲ್ಲಿದ್ದ ಕಾಲವೊಂದಿತ್ತು. ಆದರೆ ಕಾಲ ಬದಲಾಗಿದ್ದು, ಅದೇ ಮಾತು ಈಗ 'ಉದ್ಯೋಗಂ ಸರ್ವ ಲಕ್ಷಣಂ' ಎಂಬಂತಾಗಿ ಉದ್ಯೋಗವಿಲ್ಲದ ವ್ಯಕ್ತಿಗೆ ಬೆಲೆಯೇ ಇಲ್ಲ ಎನ್ನುವ ಸ್ಥಿತಿ ಇದೆ. ಜೊತೆಗೆ ಉದ್ಯೋಗವಿಲ್ಲದ ಮನುಷ್ಯನಿಗೆ ಕವಡೆ ಕಾಸಿನ ಬೆಲೆಯೂ ಇಲ್ಲವಾಗಿದ್ದು, ಬೆಳೆಯುತ್ತಿರುವ ಆಧುನಿಕ ಯುಗದಲ್ಲಿ ಎಲ್ಲ ವಸ್ತುಗಳ ಬೆಲೆಯೂ ಗಗನಮುಖಿಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಕುಟುಂಬದ ನಿರ್ವಹಣೆಗೆ ಬೇಕಾಗುವ ಆದಾಯವನ್ನು ಗಳಿಸುವ ಜವಾಬ್ದಾರಿಯನ್ನು ಕೇವಲ ಗಂಡಸು ಮಾತ್ರ ನಿರ್ವಹಿಸಿದರೆ ಸಾಲದಾಗಿದ್ದು, ಹೆಣ್ಣೂ ಕೂಡ ಉದ್ಯೋಗವನ್ನು ಕೈಗೊಳ್ಳಬೇಕಾದ

ಅನಿವಾರ್ಯತೆ ಎದುರಾಗಿರುವುದು ಸುಳ್ಳಲ್ಲ. ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಮಹಿಳೆಯರು ಸ್ಥಳೀಯವಾಗಿ ಉದ್ಯೋಗವನ್ನು ಮಾಡುತ್ತಿರುವ ಇಂದಿನ ದಿನಗಳಲ್ಲಿ ತಮ್ಮ ತಮ್ಮ ಉದ್ಯೋಗಗಳಲ್ಲಿ ತಾವು ಪೂರ್ತಿಯಾಗಿ ಕಳೆದು ಹೋಗುವವರೇ ಹೆಚ್ಚು. ಇಂತಹ ವ್ಯಕ್ತಿಗಳು ತಮ್ಮ ತಮ್ಮ ಔದ್ಯೋಗಿಕ ಬದುಕಲ್ಲಿ ಯಶಸ್ವೀ ವ್ಯಕ್ತಿಗಳಾದರೂ, ವೈಯಕ್ತಿಕ (ಸಾಂಸಾರಿಕ) ಜೀವನದಲ್ಲಿ ವಿಫಲರಾಗುವ ಸಾಧ್ಯತೆಯೇ ಅಧಿಕ. ವೃತ್ತಿ ಹಾಗೂ ಸಾಂಸಾರಿಕ ಜೀವನಗಳ ಮಧ್ಯೆ ಸಮನ್ವಯತೆಯಂತೂ ಅತ್ಯಂತ ಅಗತ್ಯವಾಗಿ ಬೇಕಾಗಿದ್ದು, ಇಲ್ಲವಾದರೆ ಸಂಸಾರಿಕ ಮತ್ತು ಔದ್ಯೋಗಿಕ ಜೀವನವು 'ಎತ್ತು ಏರಿಗೆ ಕೋಣ ನೀರಿಗೆ' ಎಂಬ ಮಾತಿನಂತೆ ಲಯ ಕಳೆದುಕೊಂಡು ಅರ್ಥಹೀನವಾಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಈ ಕೆಳಕಂಡ ಅಂಶಗಳೆಡೆಗೆ ಗಮನಹರಿಸಿದಲ್ಲಿ ವೃತ್ತಿ ಹಾಗೂ ವೈಯಕ್ತಿಕ ಜೀವನವನ್ನು ಹಾಲು ಜೇನಾಗಿಸಬಹುದು.

ಉದ್ಯೋಗಸ್ಥ ಮಹಿಳೆಯು ತನ್ನ ವೈಯಕ್ತಿಕ ಜೀವನದಲ್ಲಿ ಸದಾ ಸಮಸ್ಯೆಯಿಂದಲೇ ಬಳಲುತ್ತಿದ್ದರೆ ಆಕೆ ಮೌಲ್ಯಯುತ ಉದ್ಯೋಗಿಯಾಗಲಾರಳು. ಮಹಿಳೆಯು ಉದ್ಯೋಗಕ್ಕೆ ಎಷ್ಟು ಪ್ರಾಧಾನ್ಯತೆಯನ್ನು ನೀಡುತ್ತಾಳೋ ಅಷ್ಟೇ ಪ್ರಾಧಾನ್ಯತೆಯನ್ನು ತನ್ನ ವೈಯಕ್ತಿಕ ಜೀವನಕ್ಕೂ ನೀಡುವ ಮೂಲಕ ಸಮನ್ವಯತೆಯನ್ನುಸಾಧಿಸುವಂತಾಗಬೇಕು. ಸಂಸಾರ ಮತ್ತು ಉದ್ಯೋಗ ಎರಡನ್ನೂ ನಿಭಾಯಿಸುವ ಎಲ್ಲಾ ಮಹಿಳೆಯರು ತಮ್ಮ ದೈನಂದಿನ ಬದುಕಿನಲ್ಲಿ ನಿತ್ಯ ತಮ್ಮ ಬಗಲಲ್ಲಿ ಎರಡು ಕಾಲ್ಪನಿಕ ಚೀಲಗಳನ್ನು ಹೊಂದಿರುತ್ತಾರೆ. ಮೊದಲನೆಯದ್ದು ಕಛೇರಿಯ ಸಮಸ್ಯೆಗಳಿಂದ ತುಂಬಿದ ಚೀಲವಾದರೆ ಎರಡನೆಯದ್ದು ಕೌಟುಂಬಿಕ ಸಮಸ್ಯೆಗಳಿಂದ ತುಂಬಿದ ಚೀಲ. ಕಛೇರಿಯಿಂದ ಮಹಿಳೆ ಕುಟುಂಬದ ವಾತಾವರಣಕ್ಕೆ ಬರುತ್ತಿದ್ದಂತೆ ತನ್ನ ಭುಜದಲ್ಲಿರುವ ಕಛೇರಿಯ ಸಮಸ್ಯೆಗಳಿಂದ ತುಂಬಿದ ಚೀಲವನ್ನು ಮನೆಯ ಹೊರಗಡೆಯಿರುವ ಕಾಲ್ಪನಿಕ ಗೂಟದಲ್ಲಿ ತೂಗುಹಾಕಿ ಕೌಟುಂಬಿಕ ಸಮಸ್ಯೆಗಳ ಚೀಲವನ್ನು ಭುಜಕ್ಕೆ ನೇತು ಹಾಕಿಕೊಂಡು ಮನೆಯೊಳಗೆ ಬರಬೇಕು. ಅದೇ ರೀತಿ ಕೌಟುಂಬಿಕ ಬದುಕಿನಿಂದ ಕಛೇರಿಗೆ ಹೊರಡುವಾಗ ಕೌಟುಂಬಿಕ ಸಮಸ್ಯೆಗಳ ಚೀಲವನ್ನು ಕಾಲ್ಪನಿಕ ಗೂಟಕ್ಕೆ ತೂಗುಹಾಕಿ ಕಛೇರಿ ಸಮಸ್ಯೆಗಳ ಚೀಲವನ್ನು ತನ್ನ ಭುಜಕ್ಕೆ ಹಾಕಿಕೊಂಡು ಕಛೇರಿಗೆ ತೆರಳಿದಾಗ ಮಾತ್ರ ಎರಡೂ ಕ್ಷೇತ್ರಗಳಲ್ಲಿ ಸಮನ್ವಯತೆಯನ್ನು ಸಾಧಿಸಬಹುದು. ಆದರಿಂದ ಮಹಿಳೆ ವೃತ್ತಿಯನ್ನು ಕೇವಲ ಹೊಟ್ಟೆ ಪಾಡಿಗಾಗಿ ನಿರ್ವಹಿಸದೇ ಜತೆಯಲ್ಲಿ ತಮ್ಮ ಜೀವನವನ್ನು ರೂಪಿಸಿಕೊಳ್ಳುವಂತಹ ಮೌಲ್ಯಗಳನ್ನು ಅಳವಡಿಸಿಕೊಳ್ಳುವಂತಾಗಬೇಕು.

ಉದ್ಯೋಗಸ್ಥ ಮಹಿಳೆಯ ವೃತ್ತಿ ಮತ್ತು ಕೌಟುಂಬಿಕ ಬದುಕಿನ ಹೊಂದಾಣಿಕೆಗೆ ಸರಳ ಸೂತ್ರಗಳು

ಪ್ರಥಮ ಆದ್ಯತೆಗಳನ್ನು ಗುರುತಿಸಿಕೊಳ್ಳಬೇಕು

ಜೀವನದಲ್ಲಿ ಸಾಧಿಸಲು ಅಂತಿಮ ಗುರಿ ಇದ್ದಂತೆ ಜೀವನದ ಪ್ರಮುಖ ಅಂಶಗಳಾದ ವೈಯುಕ್ತಿಕ ಮತ್ತು ಉದ್ಯೋಗಸ್ಥ ಜೀವನಕ್ಕೆ ಗುರಿಯೊಂದಿರಬೇಕು ಹಾಗೂ ಆ ಗುರಿಯು ಮಹಿಳೆಗೆ ಸಂತೋಷವನ್ನು ನೀಡುವಂತಿರಬೇಕು. ಗುರಿಗೆ ಅಡ್ಡ ಬರುವಂತಹ ಬಾಹ್ಯ ಅಡೆತಡೆಗಳನ್ನು ಮೆಟ್ಟಿ ನಿಂತು ಪ್ರತೀ ಹೆಜ್ಜೆಯಲ್ಲೂ ಗುರಿ ಸಾಧನೆಯ ಮೂಲಕ ತನ್ನ ಪ್ರಥಮ ಆದ್ಯತೆಗಳನ್ನು ಈಡೇರಿಸಿಕೊಳ್ಳುವ ಪ್ರಯತ್ನವನ್ನು ನಿರಂತರವಾಗಿ ಉದ್ಯೋಗಸ್ಥ ಮಹಿಳೆಯು ಮಾಡುತ್ತಿರಬೇಕು.

ಕೌಟುಂಬಿಕವಾಗಿ ಮತ್ತು ಔದ್ಯೋಗಿಕವಾಗಿ ತಿದ್ದಿಕೊಳ್ಳಿ: ಸಮಸ್ಯೆಗಳು, ಸನ್ನಿವೇಶಗಳು ವಿಭಿನ್ನವಾದಂತೆ ಸಮಸ್ಯೆಗಳೂ ಭಿನ್ನವಾಗುತ್ತಿದ್ದು, ಸಮಸ್ಯೆಯ ಆಳವನ್ನರಿತು ಮುಂದಿನ ಹೆಜ್ಜೆಯನ್ನು ಇಡುವ ವಿವೇಚನೆಯಿರಬೇಕು. ಮಹಿಳೆಯು ಉದ್ಯೋಗ ಮತ್ತು ವೈಯುಕ್ತಿಕ ಬದುಕು ಎರಡನ್ನೂ ನಿಭಾಯಿಸಬೇಕಾದ ಸನ್ನಿವೇಶವೊದಗಿ ಬಂದಾಗ ಮಹಿಳೆಯು ವೈಯುಕ್ತಿಕವಾಗಿ ಮತ್ತು ಔದ್ಯೋಗಿಕವಾಗಿ ಬೆಳೆಸಿಕೊಳ್ಳಬೇಕಾದ ಮತ್ತು ತಿದ್ದಿಕೊಳ್ಳಲೇಬೇಕಾದ ಕೆಲವೊಂದು ಅಂಶಗಳನ್ನು ಪಟ್ಟಿ ಮಾಡಿಕೊಂಡು ತಿದ್ದಿಕೊಳ್ಳಲೇಬೇಕಾದ ಅಂಶಗಳನ್ನು ಅಳವಡಿಸಿಕೊಂಡು ಮುನ್ನಡೆಯುವ ಮನಸ್ಥಿತಿಯಿರಬೇಕು. ನಿಯಮಾವಳಿಗಳನ್ನು ಮತ್ತು ಜೀವನ ಮೌಲ್ಯಗಳನ್ನು ಅರಿಯುವುದು ಉತ್ತಮ

ಪ್ರತಿಯೊಂದು ಸಂಸ್ಥೆಗೂ ತನ್ನದೇ ಆದ ನಿಯಮಗಳಿದ್ದು, ಈ ನಿಯಮಾವಳಿಗಳನ್ನು ಅರಿತು ಕರ್ತವ್ಯ ನಿರ್ವಹಿಸಿದಲ್ಲಿ ಉತ್ತಮ ಉದ್ಯೋಗಿಯಾಗಿ ರೂಪುಗೊಳ್ಳುವಲ್ಲಿ ಹೇಗೆ ಸಹಕಾರಿಯಾಗುತ್ತಯೋ ಅದೇ ರೀತಿ ಕುಟುಂಬದ ಮೌಲ್ಯಗಳು ಹಾಗೂ ಕುಟುಂಬವನ್ನು ಸಂತೋಷವಾಗಿಡುವಲ್ಲಿ ಗಮನಿಸಬೇಕಾದ ಮೂಲ ಅಂಶಗಳನ್ನು ಅರಿತು ಅವುಗಳನ್ನು ಅಳವಡಿಸಿಕೊಂಡಲ್ಲಿ



ಎರಡೂ ವಿಭಾಗಗಳಲ್ಲಿ ಸಮನ್ವಯತೆಯನ್ನು ಸಾಧಿಸಬಹುದು.

ಸಹಕಾರ ಮನೋಭಾವದ ಅಗತ್ಯತೆ

ಔದ್ಯೋಗಿಕ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಣೆಯ ಅವಧಿಯಲ್ಲಿ ಸಮಸ್ಯೆಗಳು ಉದ್ಭವಿಸುವುದು ಸಾಮಾನ್ಯವಾಗಿದ್ದು, ಅಂತಹ ಸನ್ನಿವೇಶಗಳಲ್ಲಿ ಹೊಂದಾಣಿಕೆಯ ಮನೋಭಾವನೆಯನ್ನು ರೂಢಿಸಿಕೊವುದು ಉತ್ತಮ. ನಾನು ಹೇಳಿದ್ದೇ ನಡೆಯಬೇಕು ಎಂದು ಭಾವನೆ ಒಳ್ಳೆಯದಲ್ಲ. ನಮ್ಮ ಕಷ್ಟ ಕಾಲಕ್ಕೆ ಸಹಕಾರ ನೀಡುವವರು ನಮ್ಮದೇ ಸಹೋದ್ಯೋಗಿಗಳು, ಸ್ನೇಹಿತರು, ಕುಟುಂಬ ಸದಸ್ಯರು ಮತ್ತು ನೆರೆಹೊರೆಯವರು ಎಂಬುದನ್ನು ಯಾವತ್ತೂ ಮರೆಯಬಾರದು. ಮನೆಗೆ ಬಂದ ಕೂಡಲೇ ಕಛೇರಿಯ ಸಮಸ್ಯೆಗಳನ್ನೇ ಚಿಂತಿಸುತ್ತಾ ಕೂರುವ ಬದಲು ಗಂಡ, ಅತ್ತೆ ಮಾವ ತಂದೆ ತಾಯಿ ಮಕ್ಕಳೊಂದಿಗೆ ಮುಕ್ತವಾಗಿ ಮಾತನಾಡುತ್ತಾ ಅವರ ಕೆಲಸಗಳಲ್ಲಿ ಸಹಕರಿಸಿದಾಗ ಮನೆಯ ವಾತಾವರಣವೇ ಧನಾತ್ಮಕವಾಗಿ ಬದಲಾಗಿಬಿಡುತ್ತದೆ.

ಮುಕ್ತ ಸಂವಹನ

ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳೆಯು ಮೌನವಾಗಿ ಕೆಲಸ ಮಾಡುತ್ತಿರುವ ಬದಲು ಸಹೋದ್ಯೋಗಿ ಮತ್ತು ಮೇಲಾಧಿಕಾರಿಗಳೊಂದಿಗೆ ಉತ್ತಮ ಸಂವಹನ ಚಾತುರ್ಯವನ್ನು ಬೆಳೆಸಿಕೊಂಡಲ್ಲಿ ಕಛೇರಿಯಲ್ಲಿ ಉತ್ತಮ ವಾತಾವರಣದೊಂದಿಗೆ ಕರ್ತವ್ಯ ನಿರ್ವಹಿಸಬಹುದು. ಇದರಿಂದ ಹೊಸ ಕೆಲಸಗಳನ್ನು ಕಲಿಯಲು ಹಾಗೂ ಕಛೇರಿಯಲ್ಲಿ ಮೇಲಧಿಕಾರಿಗಳು ನಮ್ಮಲ್ಲಿ ಉತ್ತಮ ಅಭಿಪ್ರಾಯವನ್ನು ಹೊಂದಲು ಸಹಕಾರಿಯಾಗಬಹುದು. ಅದೇ ರೀತಿ

ಉದ್ಯೋಗಸ್ಥ ಮಹಿಳೆಯು ಮನೆಯ ಎಲ್ಲಾ ಸದಸ್ಯರೊಂದಿಗೆ ಮುಕ್ತವಾಗಿ ಮಾತನಾಡುತ್ತ ಎಲ್ಲಾ ಸಮಸ್ಯೆಗಳಿಗೂ ಪರಿಹಾರವನ್ನು ಕಂಡುಕೊಳ್ಳುವ ಮೂಲಕ ಯಶಸ್ವಿ ಗೃಹಿಣಿಯೂ ಆಗಬಲ್ಲಳು.

ಸಮಸ್ಯೆಗಳ ಪರಿಹಾರ

ವೃತ್ತಿ ಕ್ಷೇತ್ರ ಅಥವಾ ವೈಯಕ್ತಿಕ ಜೀವನದಲ್ಲಿ ಬರುವ ಹಲವಾರು ಸಮಸ್ಯೆಗಳನ್ನು ಮುಕ್ತ ಮಾತುಕತೆಯ ಮೂಲಕ ಧನಾತ್ಮಕವಾಗಿ ಪರಿಹರಿಸಿಕೊಳ್ಳುವ ಜಾಣ್ಮೆಯನ್ನು ಬೆಳೆಸಿಕೊಳ್ಳಬೇಕೇ ವಿನಃ ಸಣ್ಣ ಸಣ್ಣ ವಿಚಾರಕ್ಕೂ ಜಗಳವಾಡಬಾರದು. ಕಛೇರಿಯ ಸಮಸ್ಯೆಗಳನ್ನು ತಮ್ಮ ಮೇಲಧಿಕಾರಿಗಳ ಜತೆ, ಸಾಂಸಾರಿಕ ಸಮಸ್ಯೆಗಳನ್ನು ಸಂಬಂಧಪಟ್ಟ ಕುಟುಂಬದ ಸದಸ್ಯರ ಜತೆ ನೇರವಾಗಿ ಚರ್ಚಿಸಿ ಪರಿಹರಿಸಿಕೊಳ್ಳುವ ಕೌಶಲ್ಯವನ್ನು ಉದ್ಯೋಗಸ್ಥ ಮಹಿಳೆಯು ಹೊಂದಿರಬೇಕಾಗುತ್ತದೆ.

ಕಾಲ ಚಕ್ರಕ್ಕನುಗುಣವಾಗಿ ಜ್ಞಾನದ ವೃದ್ಧಿ ಬದಲಾಗುತ್ತಿರುವ ಸನ್ನಿವೇಶಕ್ಕನುಗುಣವಾಗಿ ತಮ್ಮ ಉದ್ಯೋಗದಲ್ಲಿ ಅವಶ್ಯವಿರುವ ಸಾಮಾನ್ಯ ಜ್ಞಾನವನ್ನು ಮತ್ತು ಕಛೇರಿಯ ದೃಷ್ಟಿಕೋನವನ್ನು ಸಮಗ್ರವಾಗಿ ಅರಿತುಕೊಂಡು ಅಲ್ಲಿ ಲಭ್ಯವಿರುವ ತಂತ್ರಜ್ಞಾನಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಕೆ ಮಾಡುವ ಮನೋಭಾವವನ್ನು ಹೊಂದುವುದು ಉತ್ತಮ. ಇದರಿಂದ ಕೆಲಸಗಳನ್ನು ಅತ್ಯಂತ ಸರಳವಾಗಿ ನಿರ್ವಹಿಸಲು ಸಹಕಾರಿಯಾಗುವುದರೊಂದಿಗೆ ಕೆಲಸಕ್ಕೆ ತಗಲುವ ಸಮಯವನ್ನು ಕಡಿತಗೊಳಿಸಿ ಮಹಿಳೆಯ ಔದ್ಯೋಗಿಕ ಮತ್ತು ಕೌಟುಂಬಿಕ ಬದುಕನ್ನು ಸಮತೋಲನ ಮಾಡಲು ಸಹಾಯಕವಾಗಲಿದೆ.

ಸಂಪರ್ಕದಲ್ಲಿರಿ

ಉದ್ಯೋಗದ ಕ್ಷೇತ್ರದಲ್ಲಿದ್ದರೂ ಕರ್ತವ್ಯ ನಿರ್ವಹಣೆಗೆ ಸಂಬಂಧಪಟ್ಟಂತೆ ನಿಮ್ಮ ಮೇಲಾಧಿಕಾರಿಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಕೌಟುಂಬಿಕ ವಿಚಾರವಾಗಿ ಅಗತ್ಯ ಸಂದರ್ಭದಲ್ಲಿ ಕುಂಟುಂಬದೊಂದಿಗೂ ನಿರಂತರ ಸಂಪರ್ಕದಲ್ಲಿರುವಂತೆ ಕಾಳಜಿ ವಹಿಸುವುಸು ಅತೀ ಅವಶ್ಯಕ. ಇದು ಉದ್ಯೋಗಸ್ಥ ಮಹಿಳೆಯ ಕಾರ್ಯ ವೈಖರಿಯನ್ನು ಹೆಚ್ಚಿಸುವುದರೊಂದಿಗೆ ಕೌಟುಂಬಿಕವಾಗಿಯೂ ಆಕೆಯನ್ನು ಯಶಸ್ವಿಯಾಗಿಸುತ್ತದೆ. ಸಲಹೆಗಳನ್ನು ಸ್ವೀಕರಿಸುವ ಮನೋಭಾವ

ಉದ್ಯೋಗಸ್ಥ ಮಹಿಳೆಯ ವೈಯಕ್ತಿಕ ಜೀವನ ಅಥವಾ ವೃತ್ತಿ ಜೀವನದ ಕುರಿತು ಸಲಹೆಯನ್ನು ನೀಡುವ ಆಪ್ತರಿರುತ್ತಾರೆ. ಅವರಲ್ಲಿ ಆಪ್ತ ಸಹೋದ್ಯೋಗಿಗಳು ಅಥವಾ ಕುಟುಂಬಸ್ಥರು ಅಥವಾ ನೆಂಟರಿಷ್ಟರು ಯಾರೇ ನೀಡುವ ಸಲಹೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸುವುದರೊಂದಿಗೆ ತನಗೆ ಸರಿಯೆನಿಸುವ ಉತ್ತಮ ಸಲಹೆಗಳನ್ನು ಆಯ್ದು ಅಳವಡಿಸಿಕೊಳ್ಳುವ ಅಭಿರುಚಿಯನ್ನು ಬೆಳೆಸಿಕೊಳ್ಳುವ ಮಾನೋಭಾವ ಅತೀ ಅಗತ್ಯವಾಗಿದೆ.

ಸಮಯ ನಿರ್ವಹಣೆಯ ಅಗತ್ಯತೆ

ಬದುಕಿನ ಪ್ರತಿ ಹಂತದಲ್ಲೂ ಸಮಯವೆಂಬುವುದು ಹಣದಷ್ಟೇ ಪ್ರಾಮುಖ್ಯತೆಯನ್ನು ಪಡೆದಿದ್ದು, ಮಹಿಳೆಯು ವೃತ್ತಿ ಜೀವನಕ್ಕೆ ಎಷ್ಟು ಸಮಯವನ್ನು ಮೀಸಲಿಡಬೇಕು ಎಂಬ ಸ್ಪಷ್ಟತೆಯನ್ನು ಮತ್ತು ಸಮಯ ಮಿತಿಯನ್ನು ಅರಿತಿರುವುದರೊಂದಿಗೆ ಕೌಟುಂಬಿಕ ಜೀವನಕ್ಕೆ ಕಡ್ಡಾಯವಾಗಿ

ಮೀಸಲಿಡಲೇಬೇಕಾದ ಸಮಯದ ಅರಿವಿರಬೇಕು. ವೃತ್ತಿ ಹಾಗೂ ವೈಯಕ್ತಿಕ ಜೀವನ ಆರೋಗ್ಯಕರ ವಾತಾವರಣದಿಂದಿರಲು ಅಗತ್ಯವಾಗಿ ಬೇಕಾಗಿರುವುದು ಸಮಯವೆಂಬುದು ತಿಳಿದಿರಬೇಕು. ಕಛೇರಿಯ ಕೆಲಸಗಳನ್ನು ನಿರ್ದಿಷ್ಟ ಅವಧಿಯೊಳಗೆ ಪೂರ್ಣಗೊಳಿಸಿ ಸಂಸಾರಕ್ಕೆ ತೊಡಗಿಸಬೇಕಾದ ಸಮಯವನ್ನು ಕಡ್ಡಾಯವಾಗಿ ತೊಡಗಿಸಬೇಕು. ಸಂದೇಹಗಳನ್ನು ಪರಿಹರಿಸಿಕೊಳ್ಳುವ ಕಲೆ: ಕಛೇರಿಯ ಕೆಲಸದಲ್ಲಿ ಯಾವುದೇ ಸಂದೇಹಗಳು ಬಂದರೂ ಅದನ್ನು ಪರಿಹರಿಸಿಕೊಂಡೇ ಮುಂದುವರೆಯುವ ಮನೋಭಾವವನ್ನು ಬೆಳೆಸಿಕೊಳ್ಳುವುದರಜೊತೆಗೆಕುಟುಂಬದಲ್ಲಿ ಬರುವ ಸಣ್ಣಪುಟ್ಟ ಗೊಂದಲಗಳು ಅನುಮಾನಗಳನ್ನು ಸಮರ್ಪಕವಾಗಿ ಪರಿಹರಿಸಿಕೊಂಡೇ ಮುಂದುವರಿಯುವ ಜಾಣ್ಮೆಯನ್ನು ಬೆಳೆಸಿಕೊಳ್ಳಬೇಕು. ಇಲ್ಲವಾದಲ್ಲಿ ಗೊಂದಲಗಳೊಂದಿಗೇ ಬದುಕು ಅತಂತ್ರವಾಗಬಹುದು.

ಮನೆಯ ಸದಸ್ಯರಿಗಾಗಿ ಸಮಯ ಮೀಸಲಿಡಿ

ಮಹಿಳೆಯು ದಿನದ 24 ಗಂಟೆಯೂ ಕರ್ತವ್ಯ ನಿರ್ವಹಣೆಯಲ್ಲಿರುತ್ತಾಳೆ ಎನ್ನಬಹುದು. ಏಕೆಂದರೆ ಕಛೇರಿ ಅವಧಿಯಲ್ಲಿ ಕಛೇರಿಯ ಸಿಬ್ಬಂದಿಯಾಗಿ, ಮನೆಯಲ್ಲಿ ಮಕ್ಕಳಿಗೆ ತಾಯಿಯಾಗಿ ಅವರ ಆರೈಕೆಯಲ್ಲಿ, ಅತ್ತೆ ಮಾವನಿಗೆ ಸೊಸೆಯಾಗಿ ಅವರ ಸೇವೆಯಲ್ಲಿ, ಮತ್ತು ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಪೂರ್ತಿಯಾಗಿ ವ್ಯಸ್ಥಳಾಗಿರುತ್ತಾಳೆ. ಆದ್ದರಿಂದ ಮಹಿಳೆ ಪುರುಷರಿಗಿಂತ ಹೆಚ್ಚು ಕೆಲಸವನ್ನು ನಿರ್ವಹಿಸುತ್ತಾಳೆ ಎಂದರೆ ತಪ್ಪಾಗಲಾರದು. ಆದ್ದರಿಂದ ಉದ್ಯೋಗಸ್ಥ ಮಹಿಳೆಯು ಮನೆಗೆ ಬಂದೊಡನೆ ಸಿಡಿಸಿಡಿ ಎನ್ನುವ ಬದಲು ಶಾಂತ ಮನಸ್ಸಿನಿಂದ ಕುಟುಂಬ ಸದಸ್ಯರೊಂದಿಗೆ ಅಲ್ಪ ಕಾಲವನ್ನಾದರೂ ಮೀಸಲಿಡುವುದು ಉತ್ತಮ. ಇದರಿಂದ ಕಛೇರಿಯ ಒತ್ತಡವನ್ನು ಸ್ವಲ್ಪವಾದರೂ ಕಡಿಮೆ ಮಾಡಿಕೊಳ್ಳಬಹುದು.

ವೈವಿಧ್ಯತೆಯನ್ನು ಕಾಯ್ದುಕೊಳ್ಳಿರಿ

ಕಛೇರಿ ಕೆಲಸದಲ್ಲಿ ಹೇಗೆ ಪ್ರತಿಯೊಬ್ಬರೂ ವೈವಿಧ್ಯತೆಯನ್ನು ನಿರೀಕ್ಷಿಸುತ್ತಾರೋ ಅದೇ ರೀತಿ ಮನೆಯ ವಾತಾವರಣದಲ್ಲೂ ವೈವಿಧ್ಯತೆಯನ್ನು ಕಾಯ್ದುಕೊಳ್ಳುವುದು ಅತೀ ಮುಖ್ಯ. ಆದ್ದರಿಂದ ವಾರದ ರಜಾ ದಿನಗಳಂದು ಕುಟುಂಬ ಸಮೇತರಾಗಿ ಹೊರಗಡೆ ಸುತ್ತಾಡಿಕೊಂಡು ಬರುವುದು, ತ್ರೈಮಾಸಿಕಕ್ಕೊಂದು ಬಾರಿ ಅಥವಾ ವರ್ಷಕ್ಕೊಮ್ಮೆಯಾದರೂ ದೂರದೂರಿಗೆ ಪ್ರವಾಸ ಹೋಗುವ ಜಾಯಮಾನವನ್ನು ಬೆಳೆಸಿಕೊಂಡಾಗ ಕುಟುಂಬದಲ್ಲಿ ಹೊಸ ಸಂತಸದ ವಾತಾವರಣವನ್ನು ಮೂಡಿಸಬಹುದು. ವಿಶೇಷ ದಿನಗಳನ್ನು ಸದಾ ನೆನಪಿನಲ್ಲಿಡುವುದು

ಮಹಿಳೆ ಉದ್ಯೋಗಸ್ಥೆಯಾಗಿದ್ದರೂ ಕಛೇರಿಯ ವಿಶೇಷ ದಿನಗಳು ಹಾಗೂ ಕುಟುಂಬದ ವಿಶೇಷ ದಿನಗಳನ್ನು ಎಂದೂ ಮರೆಯದೆ ಅವುಗಳನ್ನು ಸಮರ್ಪಕವಾಗಿ ಆಚರಿಸುವ ಮಾನೋಭಾವವನ್ನು ಹೊಂದಿರಬೇಕು. ಕಛೇರಿಯಲ್ಲಿ ವಿಶೇಷ ಸಂದರ್ಭಗಳಾದ ಹೊಸ ವರ್ಷಾಚರಣೆ, ದೀಪಾವಳಿ, ಸ್ವಾತಂತ್ರೋತ್ಸವ, ಯುಗಾದಿ ಹಬ್ಬಗಳು, ಸಹೋದ್ಯೋಗಿಗಳ ಹುಟ್ಟುಹಬ್ಬಗಳನ್ನು ಆಚರಿಸುವುದು ಮತ್ತು ಕುಟುಂಬದ ವಿಶೇಷ ಸಂದರ್ಭಗಳಾದ ವಿವಾಹ ವಾರ್ಷಿಕೋತ್ಸವ, ಕುಟುಂಬಸ್ಥರ ಹುಟ್ಟುಹಬ್ಬ, ಹಬ್ಬಗಳು ಇತ್ಯಾದಿಗಳನ್ನು ಆಚರಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು.

ಔದ್ಯೋಗಿಕ ಬದುಕಿನಲ್ಲಿ ಯಶಸ್ವಿಯಾಗಿ ಅತ್ಯುತ್ತಮ ಉದ್ಯೋಗಿ ಎಂಬ ಹೆಸರನ್ನು ಪಡೆದ ಅದೆಷ್ಟೋ ಮಂದಿ ಮಹಿಳೆಯರು ತಮ್ಮ ಸಾಂಸಾರಿಕ (ವೈಯಕ್ತಿಕ) ಬದುಕಿನಲ್ಲಿ ವಿಫಲರಾಗಿರುವ ಅದೆಷ್ಟೋ ದೃಷ್ಟಾಂತಗಳನ್ನು ನಾವು ನೋಡುತ್ತೇವೆ. ಅಂತಹ ಸಾಧಕರು ಕೇವಲ ವೃತ್ತಿಯೇ ಸರ್ವಸ್ವವೆಂಬ ಭಾವನೆಯಿಂದ ವೈಯಕ್ತಿಕ ಜೀವನದಲ್ಲಿ ವಿಫಲರಾಗಿ ಔದ್ಯೋಗಿಕ ಜೀವನದಲ್ಲಷ್ಟೇ ಯಶಸ್ವಿಯಾದರೆ ಪ್ರಯೋಜನವಿಲ್ಲ. ಅದೇ ರೀತಿ ವೈಯಕ್ತಿಕ ಬದುಕಿನಲ್ಲಿ ಅತ್ಯಂತ ಯಶಸ್ವಿಯಾಗಿ ಔದ್ಯೋಗಿಕ ಬದುಕನ್ನು ಪೂರ್ತಿ ಮರೆತು ಸೋತಂತಹ ಮಹಿಳೆಯರ ಉದಾಹರಣೆಗಳೂ ನಮ್ಮ ಕಣ್ಣ ಮುಂದಿದೆ. ಆದ್ದರಿಂದ ಉದ್ಯೋಗಸ್ಥ ಮಹಿಳೆ ವೃತ್ತಿ ಹಾಗೂ ಸಂಸಾರ ಎರಡನ್ನೂ ಸಮಾನವಾಗಿ ತೂಗಿಸಿಕೊಂಡು ಹೋಗುವುದು ಇಂದಿನ ಆಧುನಿಕ ದಿನಗಳಲ್ಲಿ ಅನಿವಾರ್ಯವಾಗಿದೆ.

ವಿಜಯಪುರ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಮಿಂಚಿದ ಮದಭಾವಿ ಶಾಲೆಯ ವಿದ್ಯಾರ್ಥಿನಿಯರು

ರಾಜ್ಯಮಟ್ಟಕ್ಕೆ ಅಶ್ವಿನಿ ರಾಠೋಡ್, ಪೂಜಾ ಚವ್ಹಾಣ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ ಗ್ರಾಮೀಣ: ವಿಜಯಪುರ ವಲಯದ ಮದಭಾವಿ ಎಲ್‌ಟಿ-2 ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರು ಜಿಲ್ಲಾ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆಗೈದು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಶಾಲೆಯ ವಿದ್ಯಾರ್ಥಿನಿ ಕುಮಾರಿ ಅಶ್ವಿನಿ ರಾಠೋಡ್ 600 ಮೀಟರ್ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ 400 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ. ಮತ್ತೊಬ್ಬ ವಿದ್ಯಾರ್ಥಿನಿ ಕುಮಾರಿ ಪೂಜಾ ಚವ್ಹಾಣ 600 ಮೀಟರ್ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ವಿದ್ಯಾರ್ಥಿನಿಯರ ಈ ಸಾಧನೆಯಿಂದ ಶಾಲೆಗೆ ಹಾಗೂ ಗ್ರಾಮಕ್ಕೆ ಕೀರ್ತಿ ತಂದಂತಾಗಿದೆ. ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿನಿಯರು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುವುದು ಶಾಲೆಯ ಶಿಕ್ಷಕರು, ಪೋಷಕರು ಹಾಗೂ ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದೆ.

ವಿದ್ಯಾರ್ಥಿನಿಯರ ಸಾಧನೆಗೆ ಶಾಲೆಯ

ಹಿರಿಯ ಮುಖ್ಯಶಿಕ್ಷಕ ದಯಾನಂದ ಮನಮಿ, ಸಹಶಿಕ್ಷಕರು, ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಅಧ್ಯಕ್ಷರು ಮತ್ತು ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.

ವಿದ್ಯಾರ್ಥಿನಿಯರಿಗೆ ಸೂಕ್ತ ತರಬೇತಿ ನೀಡಿ ಮಾರ್ಗದರ್ಶನ ಮಾಡಿದ ಸಹಶಿಕ್ಷಕ ವೈ.ಬಿ. ಬಿದರಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕ ಸಂಗನಗೌಡ ಬಿರಾದಾರ ಅವರ ಪರಿಶ್ರಮಕ್ಕೆ ಶಾಲೆಯ ಶಿಕ್ಷಕರು ಮತ್ತು ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ರಾಜ್ಯಮಟ್ಟದ ಸ್ಪರ್ಧೆಯಲ್ಲಿಯೂ ವಿದ್ಯಾರ್ಥಿನಿಯರು ಯಶಸ್ಸು ಸಾಧಿಸಲಿ ಎಂದು ಹಾರೈಸಿದ್ದಾರೆ.

ಪ್ರಬಂಧ ಸ್ಪರ್ಧೆಗೆ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ (ನೋಂ) ವಿಜಯಪುರ ಜಿಲ್ಲಾ ಸಮಿತಿಯು "ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿದ ಮಹನೀಯರು" ಈ ವಿಷಯವಾಗಿ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಿದೆ. ವಯಸ್ಸಿನ ಮಿತಿಯಿಲ್ಲ , ಪ್ರಬಂಧ ಕಳಸಬಯಸುವರು 200 ಪದಗಳ ಮಿತಿಯಲ್ಲ , ಮೊಬೈಲ್ ನಲ್ಲಿ ಟೈಪ್ ಮಾಡಿ ಈ ಸಂಖ್ಯೆಗೆ 81054 73275 (ಸುಕಾಂತ ಕುಲಕರ್ಣಿ) ವಾಟ್ಸಪ್ ಮೂಲಕ ಕಳಿಸಲು ಕೋರಲಾಗಿದೆ. ಸ್ಪರ್ಧೆಯಲ್ಲಿ ತೀರ್ಪುಗಾರರ ನಿರ್ಣಯವೇ ಅಂತಿಮವಾಗಿರುತ್ತದೆ. ಪ್ರಥಮ, ದ್ವಿತೀಯ, ತೃತೀಯ ಮತ್ತು 10 ಜನರಿಗೆ ಮೆಚ್ಚುಗೆಯ ಪ್ರಮಾಣಪತ್ರವನ್ನು ವಾಟ್ಸಪ್ ಮೂಲಕ ಪ್ರದಾನ ಮಾಡಲಾಗುವುದು, ಮತ್ತು ಸ್ಪರ್ಧೆಗೆ ಕಳಿಸಲು ಕೊನೆಯ ದಿನಾಂಕ ನವೆಂಬರ್ 10 ಆಗಿರುತ್ತದೆ ಎಂದು ಅಖಿಲ ಭಾರತೀಯ ಸಾಹಿತ್ಯ ಪರಿಷದ್ ವಿಜಯಪುರ ಜಿಲ್ಲಾಧ್ಯಕ್ಷರಾದ ವಿವೇಕ ಕುಲಕರ್ಣಿ ಅವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿ 81054 73275.

ಮನೆಗಳಲ್ಲಿ ಗ್ರಂಥಾಲಯವಿರಲಿ :ನಿರಗುಡಿ

■ ಉದಯರಶ್ಮಿ ದಿನಪತ್ರಿಕೆ

ಕಲಬುರಗಿ:ಇಂದಿನ ಡಿಜಿಟಲ್ ಯುಗದಲ್ಲಿ ಪುಸ್ತಕ ಓದುವ ಹವ್ಯಾಸ ಬೆಳೆಸುವುದು ಅತ್ಯಗತ್ಯ. ಪ್ರತಿಯೊಂದು ಮನೆಯಲ್ಲೂ ಗ್ರಂಥಾಲಯ ಸ್ಥಾಪಿಸುವ ಮೂಲಕ ಮಕ್ಕಳಲ್ಲಿ ಓದುವ ಅಭಿರುಚಿ ಬೆಳೆಸಿ, ಜ್ಞಾನವಂತ, ವಿಚಾರವಂತ ಹಾಗೂ ಸಂಸ್ಕಾರಯುತ ಸಮಾಜ ನಿರ್ಮಿಸಲು ಎಲ್ಲರೂ ಕೈಜೋಡಿಸಬೇಕು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಾದ ಬಿ.ಎಚ್.ನಿರಗುಡಿ ಹೇಳಿದರು.

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಹಾಗೂ ಜಿಲ್ಲಾ ಜಾಗೃತ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಕಲಬುರಗಿ ನಗರದ ವಿವೇಕಾನಂದ ನಗರ, ಆಳಂದ ರಸ್ತೆಯಲ್ಲಿರುವ ಸಾಹಿತಿ ಹಾಗೂ ಪ್ರಾಧ್ಯಾಪಕ ಡಾ. ಶರಬಯ್ಯ ಸ್ವಾಮಿ ಅವರ ನಿವಾಸದಲ್ಲಿ ಆಯೋಜಿಸಿದ್ದ 'ಮನೆಗೊಂದು ಗ್ರಂಥಾಲಯ' ಅನುಷ್ಠಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಾ ಮನೆಯಲ್ಲಿನ ದೇವರ ಕೋಣೆ ಹಾಗೂ ಮಲಗುವ ಕೋಣೆಗೆ ನೀಡುವಷ್ಟೇ ಮಹತ್ವವನ್ನು ಪುಸ್ತಕ ಕೋಣೆ ಅಥವಾ ಗ್ರಂಥಾಲಯಕ್ಕೂ ನೀಡಬೇಕು. ಪ್ರತ್ಯೇಕ ವಾಚನ ಸ್ಥಳವಿದ್ದರೆ ಕುಟುಂಬದ ಸದಸ್ಯರಲ್ಲಿ ಓದುವ ಹವ್ಯಾಸ ಬೆಳೆಸಲು ಹಾಗೂ ಮಕ್ಕಳಿಗೆ ಉತ್ತಮ ಓದುವ ವಾತಾವರಣ ಕಲ್ಪಿಸಲು ಸಾಧ್ಯ. ಪುಸ್ತಕಗಳು ಜ್ಞಾನ ನೀಡುವುದಷ್ಟೇ ಅಲ್ಲದೆ, ವ್ಯಕ್ತಿಯ ಆಲೋಚನೆ, ನಡವಳಿಕೆ ಮತ್ತು ಜೀವನದ ದೃಷ್ಟಿಕೋನವನ್ನು ರೂಪಿಸುತ್ತವೆ ಎಂದು ನಿರಗುಡಿ ಹೇಳಿದರು.

ಮಕ್ಕಳು ಪಠ್ಯಪುಸ್ತಕಗಳ ಜೊತೆಗೆ ಕಥೆ, ಕಾದಂಬರಿ, ಜೀವನಚರಿತ್ರೆ, ಇತಿಹಾಸ, ವಿಜ್ಞಾನ ಹಾಗೂ ಸಾಹಿತ್ಯ ಕೃತಿಗಳನ್ನು ಓದಬೇಕು. ಇದರಿಂದ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ, ಭಾಷಾ ಕೌಶಲ್ಯ ಮತ್ತು ಆತ್ಮವಿಶ್ವಾಸ ವೃದ್ಧಿಯಾಗುತ್ತವೆ. ಮನೆಮನೆಗಳಲ್ಲಿ ಗ್ರಂಥಾಲಯ ಸ್ಥಾಪಿಸುವ ಮೂಲಕ ಓದುವ ಸಂಸ್ಕೃತಿಯನ್ನು ಬಲಪಡಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಸೇಡಂ ತಾಲೂಕು ಉಪಕಾರಾಗೃಹದ ಹೆಡ್ ವಾರ್ಡರ್ ಶ್ರೀಕಾಂತ ರಂಜೇರಿ ಮಾತನಾಡಿ, ಪುಸ್ತಕ ಓದುವ ಹವ್ಯಾಸವು ಜ್ಞಾನವನ್ನು ವಿಸ್ತರಿಸುವುದರ ಜೊತೆಗೆ ಚಿಂತನಾಶಕ್ತಿ, ವಿವೇಕ ಮತ್ತು ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂದರು.

ಇಂದಿನ ದಿನಗಳಲ್ಲಿ ಜನರು ಗಂಟೆಗಟ್ಟಲೆ ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸಮಯ ಕಳೆಯುತ್ತಿದ್ದಾರೆ. ಪ್ರತಿದಿನ ಕನಿಷ್ಠ ಒಂದು ಗಂಟೆಯನ್ನು ಪುಸ್ತಕ ಓದುವುದಕ್ಕೆ ಮೀಸಲಿಟ್ಟರೆ ಕಲ್ಪನಾಶಕ್ತಿ, ವಿಚಾರಶಕ್ತಿ ಹಾಗೂ ಆಳವಾದ ಚಿಂತನೆ ಬೆಳೆಸಿಕೊಳ್ಳಬಹುದು ಹಾಗೂ ಮಹನೀಯರ ಜೀವನಚರಿತ್ರೆಗಳನ್ನು ಓದುವುದರಿಂದ ಅವರ ಸಾಧನೆ, ಹೋರಾಟ ಮತ್ತು ಪರಿಶ್ರಮದಿಂದ ಸ್ಫೂರ್ತಿ ಪಡೆಯಬಹುದು. ತಂತ್ರಜ್ಞಾನವನ್ನು ಜ್ಞಾನಾರ್ಜನೆಗೆ ಪೂರಕವಾಗಿ ಬಳಸಿಕೊಂಡು, ಮೊಬೈಲ್ ಬಳಕೆಯ ನಡುವೆಯೂ ಪುಸ್ತಕ ಓದುವ ಹವ್ಯಾಸವನ್ನು ನಿರಂತರವಾಗಿ ಮುಂದುವರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಕಲಬುರಗಿಯ ಭೂಮಾಪಕ ನಿಜಲಿಂಗಪ್ಪ ನಿಗಡಿ ಮಾತನಾಡಿ, ಮನೆಯಲ್ಲೊಂದು ಗ್ರಂಥಾಲಯ ನಿರ್ಮಿಸುವುದು ಕುಟುಂಬದ ಜ್ಞಾನಸಂಪತ್ತನ್ನು ವೃದ್ಧಿಸುವ ಮಹತ್ವದ ಕಾರ್ಯವಾಗಿದೆ ಎಂದರು.

ಮನೆಗೆ ಕಿಟಕಿಗಳು ಎಷ್ಟು ಮುಖ್ಯವೋ, ವ್ಯಕ್ತಿತ್ವದ ನಿರ್ಮಾಣಕ್ಕೆ ಪುಸ್ತಕಗಳು ಅಷ್ಟೇ ಮುಖ್ಯ. ಕಿಟಕಿಗಳ ಮೂಲಕ ಗಾಳಿ ಮತ್ತು ಬೆಳಕು ಒಳಬರುವಂತೆ, ಪುಸ್ತಕಗಳ ಮೂಲಕ ಮನಸ್ಸಿಗೆ ಜ್ಞಾನ ಹಾಗೂ ಹೊಸ ವಿಚಾರಗಳು ಪ್ರವೇಶಿಸುತ್ತವೆ. ಈ ಅರ್ಥದಲ್ಲಿ ಪುಸ್ತಕಗಳು ಜ್ಞಾನದ ಕಿಟಕಿಗಳಿದ್ದಂತೆ ಎಂದು ವಿವರಿಸಿದರು.

ಜ್ಞಾನವನ್ನು ವೃದ್ಧಿಸುವ, ಉತ್ತಮ ಮಾರ್ಗದರ್ಶನ ನೀಡುವ ಹಾಗೂ ಜೀವನಕ್ಕೆ ಸಕಾರಾತ್ಮಕ ದಿಕ್ಕು ತೋರಿಸುವ ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡು ಓದಬೇಕು.

ಕುಡಿಯುವ ನೀರಿನ ಸಹಾಯವಾಣಿ

■ ಉದಯರಶ್ಮಿ ದಿನಪತ್ರಿಕೆ

ಜೇವರ್ಗಿ: ತಾಲೂಕಿನಲ್ಲಿ ಬರ ಪರಿಸ್ಥಿತಿ ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆಗಳು ಕಂಡುಬಂದಲ್ಲಿ ಪರಿಹಾರ ಕಲ್ಪಿಸುವ ಕುರಿತು ಸಹಾಯವಾಣಿಯನ್ನು ಇಲ್ಲಿನ ತಾಲೂಕು ಪಂಚಾಯತ್ ಕಾರ್ಯಾಲಯದಲ್ಲಿ ತೆರೆಯಲಾಗಿದೆ. ಸಹಾಯವಾಣಿ ಕೇಂದ್ರದ ದೂರವಾಣಿ ಸಂಖ್ಯೆ 8762767573ಗೆ ಸಂಪರ್ಕಿಸಿ ಅಥವಾ ಕಛೇರಿಗೆ ಆಗಮಿಸಿ ದೂರುಗಳನ್ನು ನೀಡಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದೆಂದು ಜೇವರ್ಗಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ವೀರಣ್ಣ ಕೌಲಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಬಂಧ ಸ್ಪರ್ಧೆ: ಸಿದ್ದಾರಾಮ ಪೂಜಾರಿ ಪ್ರಥಮ ಸ್ಥಾನ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ವಿಜಯಪುರ ಜಿಲ್ಲೆಯಲ್ಲಿ ನಡೆದ ಜಿಲ್ಲಾ ಮಟ್ಟದ 'ಪ್ರಾಚ್ಯ ಪ್ರಜ್ಞೆ' ವಿಷಯದ ಪ್ರಬಂಧ ಸ್ಪರ್ಧೆಯಲ್ಲಿ ಅರ್ಜನಾಳ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸಿದ್ದಾರಾಮ ಪೂಜಾರಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ. ವಿದ್ಯಾರ್ಥಿಯ ಸಾಧನೆಗೆ ಶಾಲೆಯ ಶಿಕ್ಷಕರು ಹಾಗೂ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಚಿವ ಎಂ.ಬಿ.ಪಾಟೀಲ ಜಿಲ್ಲಾ ಪ್ರವಾಸ ವಿವರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ಅ.31, ನ.1 ಮತ್ತು 2 ರಂದು ಮೂರು ದಿನಗಳ ಕಾಲ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಅ.31 ಶನಿವಾರ, ಬೆ.10ಗಂ. ನಿಡೋಣಿ ಗ್ರಾಮದಲ್ಲಿ ಆರೋಗ್ಯ ಇಲಾಖೆ ರೂ.65 ಲಕ್ಷ ವೆಚ್ಚದಲ್ಲಿ ಆಯುಷ್ಮಾನ ಆರೋಗ್ಯ ಭವನ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಲಿದ್ದಾರೆ. ಬೆ.11ಗಂ. ಕಾಖಂಡಕಿ ಹರಳಯ್ಯನ ಗುಂಡದ ಹತ್ತಿರ ಲೋಕೋಪಯೋಗಿ ಇಲಾಖೆ ರೂ.80 ಲಕ್ಷ ವೆಚ್ಚದಲ್ಲಿ ಪ್ರಾನ್ಸಿ ಯೋಜನೆ ಅಡಿ ಹರಳಯ್ಯನ ಗುಂಡ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ಮ.12ಗಂ. ಶೇಗುಣಶಿ ಗ್ರಾಮದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಸತಿ ಇಲಾಖೆ ರೂ.12ಕೋಟಿ ವೆಚ್ಚದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡ ಕಾಮಗಾರಿ ಭೂಮಿ ಪೂಜೆ ಸಲ್ಲಿಸಲಿದ್ದಾರೆ. ಸಂ.6ಗಂ. ನಗರದ ಬಂಜಾರಾ ಕ್ರಾಸ್ ಹತ್ತಿರದ ವೀರಶೈವ ಲಿಂಗಾಯತ ಸಾಂಸ್ಕೃತಿಕ ಸಮುದಾಯ ಭವನದಲ್ಲಿ 22ನೇ ಶರಣ–ತತ್ವ ಕಮ್ಮಟ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ನ.1 ರವಿವಾರ, ಬೆ.9ಗಂ. ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ಬೆ.11.30ಗಂ. ಹೊನವಾಡ ಗ್ರಾಮದಲ್ಲಿ ಬೆಂಗಳೂರು ಕೆಂಪೆಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸಿ.ಎಸ್.ಆರ್. ಅನುದಾನದಲ್ಲಿ ಎಂ.ಪಿ.ಎಸ್. ಶಾಲಾ ಕಟ್ಟಡ ಭೂಮಿಪೂಜೆ ನೆರವೇರಿಸಲಿದ್ದಾರೆ. ಸಂ.6ಗಂ. ತಿಕೋಟಾ ಅಮ್ಮ ಫಂಕ್ಷನ ಹಾಲ್ ನಲ್ಲಿ ಎಂ.ಬಿ.ಪಿ ಉತ್ಸವ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ನ.2 ಸೋಮವಾರ ಬೆ. 10ಗಂ. ನಗರದ ಪೊಲೀಸ್ ಗ್ರೌಂಡ್ ನಲ್ಲಿ ಪೊಲೀಸ್ ಇಲಾಖೆ ಪ್ರಾಪರ್ಟಿ ರಿಟರ್ನ್ ಪರೇಡ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಚಿವರ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಲ್ಲಯ್ಯ ದೇವಸ್ಥಾನ ಸಮಿತಿ ಸದಸ್ಯರಿಗೆ ಸನ್ಮಾನ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಜಾತ್ರೆಯ ಯಶಸ್ಸಿಗೆ ಪಟ್ಟಣದ ಜನತೆ, ಸಮಿತಿಯ ಎಲ್ಲ ಸದಸ್ಯರು ಹಾಗೂ ಪಟ್ಟಣ ಪಂಚಾಯಿತಿ ಸದಸ್ಯರು, ಜಾತ್ರೆಗೆ ಆಗಮಿಸಿದ ಸದ್ಭಕ್ತರು ಸೇರಿದಂತೆ ಪೊಲೀಸ್, ಹೆಸ್ಕಾಂ ಸಹಿತ ವಿವಿಧ ಇಲಾಖೆಗಳ ಸಹಕಾರವೇ ಕಾರಣ ಎಂದು ಶ್ರೀ ರಾವುತರಾಯ ಮಲ್ಲಯ್ಯ ದೇವಸ್ಥಾನ ಸಮಿತಿ ಅಧ್ಯಕ್ಷ ವಿನೋದಗೌಡ ಪಾಟೀಲ ಹೇಳಿದರು.

ಪಟ್ಟಣದ ಶಿವನಕಳ್ಳಿ ದೇವಸ್ಥಾನದ ಆವರಣದಲ್ಲಿ ಗುರುವಾರ ಗಜಾನನ ಮಂಡಳಿಯ ಸದಸ್ಯರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಜಾತ್ರೆಗೆ ಆಗಮಿಸಿದ ಲಕ್ಷಾಂತರ ಭಕ್ತರಿಗೆ ಯಾವುದೇ ಲೋಪ, ತೊಂದರೆಯಾಗದಂತೆ ಸಾರ್ವಜನಿಕರು ಸ್ವಯಂಪ್ರೇರಿತರಾಗಿ ತಮ್ಮ ಸಂಘಟನೆಗಳ ಮೂಲಕ ಅನ್ನ ಸಂತರ್ಪಣೆ ಕೈಗೊಂಡಿದ್ದು ಪ್ರಶಂಸನೀಯ ಕಾರ್ಯ. ಇನ್ನೂ ದೇವಸ್ಥಾನ ಸಮಿತಿ ಅಚ್ಚುಕಟ್ಟಾಗಿ ತನ್ನ ಯೋಜನೆ ರೂಪಿಸಿತು. ಇನ್ನೂ ಪೊಲೀಸ್ ಇಲಾಖೆ ಪಿಎಸ್ಐ ಸಚೀನ ಆಲಮೇಲಕರ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ಮಾಡಿ ಯಾವುದೇ ಅಹಿತಕರ ಘಟನೆ ಜರುಗದಂತೆ ಕರ್ತವ್ಯ ನಿರ್ವಹಿಸಿತು. ಹೆಸ್ಕಾಂ ಇಲಾಖೆಯು ಸಹ ಸಹಕಾರ ನೀಡಿತು. ಒಟ್ಟಾರೆ ಜಾತ್ರೆಯ ಯಶಸ್ಸು ಎಲ್ಲರಿಗೂ ಸಲ್ಲುತ್ತದೆ ಎಂದರು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಅಫ್ರೋಜ್ ಅಹ್ಮದ್ ಪಟೇಲ ಮಾತನಾಡಿ, ಪಂಚಾಯಿತಿ ಸದಸ್ಯರು ಸಹಕಾರ ನೀಡಿದಲ್ಲಿ ಯಾವುದೇ ಕಾರ್ಯ ಅಸಾಧ್ಯವಲ್ಲ. ಅವರ ಮಾರ್ಗದರ್ಶನದಲ್ಲಿ ಅಗತ್ಯ ಕಾರ್ಯ ನೆರವೇ–ರಿಸಲಾಗುತ್ತದೆ ಎಂದರು.

ದೇವಸ್ಥಾನ ಸಮಿತಿ ಉಪಾಧ್ಯಕ್ಷ ಶ್ರೀಧರ ನಾಡಗೌಡ, ಕಾರ್ಯದರ್ಶಿ ಮಲ್ಲು ನಾಟೀಕಾರ ಮಾತನಾಡಿದರು. ಗಜಾನನ ಮಂಡಳಿಯ ಶರಣಗೌಡ ಅಂಗಡಿ, ಭೀಮರಾಯ ಶಾಬಾದಿ, ಶಾಂತಪ್ಪ ಬಿರಾದಾರ (ಜಲಕತ್ತಿ), ಮಲ್ಲಪ್ಪ ಅಗಸರ, ಶಿವಾನಂದ ಕುಂಬಾರ, ನರೇಂದ್ರ ನಾಡಗೌಡ, ಮಲ್ಲು ಹಳಿಮನಿ, ಮಂಜು ಒಂಟೆತ್ತಿನ, ರಮೇಶ ಮಾಳನೂರ, ಆನಂದ ಚಟ್ಟರಕಿ, ಮಡು ಹಡಪದ, ರವಿ ಮಿಂಚನಾಳ, ಮಾಂತೇಶ ವಂದಾಲ, ಯಮನಪ್ಪ ದಂಡಿನ ನಿಂಗು ಹಡಗಲಿ, ಶಶಿ ಒಂಟೆತ್ತಿನ, ಮಲ್ಲು ಭಂಡಾರಿ, ನಿಂಗು ಜಲಕತ್ತಿ, ಮಹೇಶ ಯಕ್ಕೆಳ್ಳಿ, ಇದ್ದರು.

ನ.15ಕ್ಕೆ ಮಹಾರಾಣಾ ಪ್ರತಾಪ್ ಸಿಂಗ್ ಮೂರ್ತಿ ಅನಾವರಣ; ಶಾಸಕ ಯತ್ನಾಳ ಭಾಗಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಇದೇ ನವೆಂಬರ್ 15 ರಂದು ತಾಳಿಕೋಟಿ ಪಟ್ಟಣದ ಬಸ್ ನಿಲ್ದಾಣ ಹತ್ತಿರ ನೂತನವಾಗಿ ನಿರ್ಮಾಣ ಮಾಡಲಾದ ಭಾರತದ ಹೆಮ್ಮೆಯ ವೀರಪುತ್ರ, ಸ್ವಾಭಿಮಾನದ ಪ್ರತೀಕವಾಗಿರುವ ಮಹಾರಾಣಾ ಪ್ರತಾಪ ಸಿಂಗ್ ಅವರ ವೃತ್ತ ಹಾಗೂ ಕಂಚಿನ ಪುತ್ಥಳಿ ಲೋಕಾರ್ಪಣೆ ಸಮಾರಂಭದಲ್ಲಿ ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಸಹಸ್ರಾರು ಹಿಂದೂ ಕುಲಬಾಂಧವರನ್ನು ಉದ್ದೇಶಿಸಿ ಮಾತನಾಡುವರು.

ತಾಳಿಕೋಟಿ ರಾಜಪೂತ ಸಮಾಜ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಈಚೆಗೆ ಭೇಟಿಯಾಗಿ, ಆಹ್ವಾನ ಪತ್ರ ನೀಡಿದರು.

ಕಾರಣ ಮುಖಂಡರು, ಹಿತೈಷಿಗಳು, ದೇಶಭಕ್ತರು,ಸಮಸ್ತ ಹಿಂದೂ ಕುಲಬಾಂಧವರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ, ರಾಷ್ಟ್ರ ಪುರುಷನಿಗೆ ಗೌರವ ಸಲ್ಲಿಸುವ ಜೊತೆಗೆ ಶೋಭೆ ತರಬೇಕೆಂದು ನಗರ ಶಾಸಕರ ಸಾರ್ವಜನಿಕ ಸಂಪರ್ಕ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ಕ್ಯಾಂಪಸ್ ಸಂದರ್ಶನ: ಪಾಲಿಟೆಕ್ನಿಕ್ 37 ವಿದ್ಯಾರ್ಥಿಗಳು ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಪ್ರತಿಷ್ಠಿತ ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್, ವಿದ್ಯಾಲಯದಲ್ಲಿ ಜಾಗತಿಕ ಖ್ಯಾತಿಯ 'ಟೊಯೋಟಾ ಇಂಡಸ್ಟ್ರೀಸ್ ಎಂಜಿನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್'(ಖಿಂಥಿಂಣಚಿ ಋಟಿಜಣಡಿಟಜ ಇಟಿರುಟಿಜ ಋಟಿಜುಚಿ ಕತಣ. ಐಣಜ. – ಖಿಋಇಋ) ಡಿಪ್ಲೋಮಾ ವಿದ್ಯಾರ್ಥಿಗಳಿಗಾಗಿ ನಡೆಸಿದ ಕ್ಯಾಂಪಸ್ ಸಂದರ್ಶನದಲ್ಲಿ ಪಾಲಿಟೆಕ್ನಿಕ್ ನ 37 ವಿದ್ಯಾರ್ಥಿಗಳು ಅಪ್ರೆಂಟಿಸ್ ಗೆ ಆಯ್ಕೆಯಾಗಿದ್ದಾರೆ.

ಅಕ್ಟೋಬರ್ 28 ರಂದು ಬುಧವಾರ ಪಾಲಿಟೆಕ್ನಿಕ್ ನಲ್ಲಿ ಮೆಕ್ಯಾನಿಕಲ್ ಮತ್ತು ಅಟೋಮೊಬೈಲ್ ಎಂಜಿನಿಯ–ರಿಂಗ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳು ಈ ಸಂದರ್ಶನದಲ್ಲಿ ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಸರಕಾರಿ ಮತ್ತು ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳಿಂದ ಒಟ್ಟು 143ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಲಿಖಿತ ಪರೀಕ್ಷೆ ಮತ್ತು ತಾಂತ್ರಿಕ ಮೌಖಿಕ ಸಂದರ್ಶನ ಪ್ರಕ್ರಿಯೆಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ 85 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಂತಿಮವಾಗಿ ಉದ್ಯೋಗಕ್ಕೆ ಆಯ್ಕೆ ಮಾಡಿ ಸ್ಥಳದಲ್ಲಿಯೇ ನೇಮಕಾತಿ ಆದೇಶ ಪತ್ರವನ್ನು ನೀಡಲಾಯಿತು.

ಆಯ್ಕೆಯಾದ ಈ 85 ವಿದ್ಯಾರ್ಥಿಗಳಲ್ಲಿ 37 ಜನ ಬಿ.ಎಲ್.ಡಿ.ಇ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿರುವುದ ಗಮನಾರ್ಹವಾಗಿದೆ. ಈ ಆಯ್ಕೆ ಪ್ರಕ್ರಿಯೆ ಸಂದರ್ಭದಲ್ಲಿ ಟೊಯೋಟಾ ಇಂಡಸ್ಟ್ರೀಸ್ ಎಂಜಿನ್ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ನಾಗೇಂದ್ರ ಕುಮಾರ್ ಕೆ. ಎಸ್., ಗ್ರೂಪ್ ಲೀಡರ್ ವಿಶ್ವ ಪೂರ್ಣ ರಾವ ಹಾಗೂ ಲೀಡರ್ ನಾಗೇಶ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಚಾರ್ಯ ಪ್ರಭುದೇವ ಬಿ. ಕಳಸಗೊಂಡ, ಉದ್ಯೋಗಾಧಿಕಾರಿ ಸುಧನ್ವ ವಿ. ಕುಲಕರ್ಣಿ, ಪಾಂಡುರಂಗ ಅಸ್ಲಂಕರ, ಈರೇಶ ಪಾಟೀಲ, ಮೆಕ್ಯಾನಿಕಲ್ ಮತ್ತು ಆಟೋಮೋಬೈಲ್ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಸ್ಥಳೀಯ ಮತ್ತು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಗಣನೀಯ ಪ್ರಮಾಣದಲ್ಲಿ ಪ್ರತಿಷ್ಠಿತ ಟೊಯೋಟಾ ಇಂಡಸ್ಟ್ರೀಸ್ ಸಂಸ್ಥೆಯಲ್ಲಿ ಉದ್ಯೋಗ ಪಡೆದಿರುವುದಕ್ಕೆ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷ ಮತ್ತು ಕೈಗಾರಿಕೆ, ಮೂಲಸೌಲಭ್ಯ ಅಭಿವೃಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ, ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ, ಆಡಳಿತ ಮಂಡಳಿಯ ನಿರ್ದೇಶಕರು, ಸಂತಸ ವ್ಯಕ್ತಪಡಿಸಿದ್ದು, ವಿದ್ಯಾರ್ಥಿಗಳಿಗೆ, ಕಾಲೇಜಿನ ಎಲ್ಲ ಸಿಬ್ಬಂದಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಕೆಯುಡಬ್ಲ್ಯೂಜೆ ಯಿಂದ ಅಗಲಿದ ಪತ್ರಕರ್ತರಿಗೆ ನುಡಿ ನಮನ

■ ಉದಯರಶ್ಮಿ ದಿನಪತ್ರಿಕೆ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ರಾಜ್ಯ ಸಂಘದ ವತಿಯಿಂದ ಇತ್ತೀಚೆಗೆ ಇಹ ಲೋಕ ತ್ಯಜಿಸಿದ ಹಿರಿಯ ಪತ್ರಕರ್ತರಾದ ಶಿವಮೊಗ್ಗದ ಬಂಡಿಗಡಿ ನಂಜುಂಡಪ್ಪ ಮತ್ತು ಚಾಮರಾಜ ನಗರದ ಪತ್ರಿಕಾ ಛಾಯಾಗ್ರಾಹಕ ಸಿ.ಆರ್.ವೆಂಕಟರಾವ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಕಂದಾಯ ಭವನ, ಕೆಯುಡಬ್ಲ್ಯೂಜೆ ಸಭಾಂಗಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರು ಮಾತನಾಡಿ, ನಮ್ಮ ಜೊತೆಗಿದ್ದು ಇಂದು ಇಲ್ಲವಾದ ಪತ್ರಕರ್ತ ಸ್ನೇಹಿತರನ್ನು ನಾವು ನೆನಪಿಸಿಕೊಂಡು ಅವರ ಆತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಒಂದು ನಿಮಿಷ ಮೌನಾಚರಣೆ ಮೂಲಕ ಪ್ರಾರ್ಥಿಸಿ ಪುಷ್ಪನಮನ ಸಲ್ಲಿಸುವ ಪದ್ಧತಿಯನ್ನು ನಮ್ಮ ರಾಜ್ಯ ಸಂಘ ಮುಂದು ವರಿಸಿಕೊಂಡು ಬರುತ್ತಿದೆ ಎಂದರು.

ಅಗಲಿದ ಹಿರಿಯ ಪತ್ರಕರ್ತ ಶಿವಮೊಗ್ಗದ ಬಂಡಿಗಡಿ ನಂಜುಂಡಪ್ಪ ನವರು ನಮ್ಮ ರಾಜ್ಯ ಸಂಘದ ಜೊತೆ ನಿರಂತರ ಸಂಪರ್ಕ ಹೊಂದಿದ್ದರು. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ, ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿದ ಇವರಿಗೆ ತಡವಾಗಿಯಾದರೂ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಲಭಿಸಿರುವುದು ಸಂತಸ ತಂದಿದೆ.

ಇಂದು ಅವರು ನಮ್ಮೊಂದಿಗೆ ಇಲ್ಲವಾದರೂ ಸಂಘಕ್ಕೆ ಅವರು ನೀಡಿದ ಕೊಡುಗೆ ಸ್ಮರಿಸಲೇ ಬೇಕು ಎಂದರು.

ಚಾಮರಾಜ ನಗರದ ಹಿರಿಯ ಪತ್ರಿಕಾ ಛಾಯಾಗ್ರಾಹಕ ಸಿ.ಆರ್.ವೆಂಕಟರಾವ್ ಅವರು ಕೂಡಾ ಸಂಘದಲ್ಲಿ ಸಕ್ರೀಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಇಬ್ಬರೂ ಹಿರಿಯ ಜೀವಗಳಿಗೆ ಸದ್ಗತಿ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ ಎಂದರು. ಪ್ರಧಾನ ಕಾರ್ಯದರ್ಶಿ ಜೆ.ಸಿ.ಲೋಕೇಶ ಮಾತನಾಡಿ, ಬಂಡಿ ನಂಜುಂಡಪ್ಪ ನವರು ಇತ್ತೀಚಿನ ವರೆಗೂ ರಾಜ್ಯಸಂಘದ ಒಡ ನಾಟದಲ್ಲಿದ್ದರು ಶಿವಮೊಗ್ಗದ ಕೆಲವು ಪತ್ರಕರ್ತರಲ್ಲಿ ಭಿನ್ನಭಿಪ್ರಾಯ ಮೂಡಿ ಬೇರೆ, ಬೇರೆ ಸಂಘದ ಹಾದಿ ಹಿಡಿದ ಸಮಯದಲ್ಲೂ ಅವರು ನಮ್ಮ ಸಂಘಕ್ಕೆ ಬದ್ದರಾಗಿಯೇ ತಮ್ಮನಿಷ್ಠೆ ತೋ–ರಿಸಿದ್ದರು. ಪತ್ರಿಕಾ ಛಾಯಾಗ್ರಾಹಕರಾದ ವೆಂಕಟ–ರಾವ್ ಕೂಡಾ ಪ್ರಜಾವಾಣಿ ಪತ್ರಿಕೆಯಲ್ಲಿ ಸೇವೆಸಲ್ಲಿಸುತ್ತಾ ಎಲ್ಲರೊಂದಿಗೂ ಆತ್ಮೀಯರಾಗಿ ಬೆರೆಯುತ್ತಿದ್ದರು ಎಂದು ಸ್ಮರಿಸಿದರು. ಹಿರಿಯ ಪತ್ರಕರ್ತರಾದ ಶಿವಾನಂದ್, ಶಶಿಕಲಾ ಅಗಲಿದ ಪತ್ರಕರ್ತರ ಕುರಿತು ಮಾತನಾಡಿದರು.

ರಾಜ್ಯ ಸಂಘದ ಖಜಾಂಚಿ ಎಂ.ವಾಸುದೇವ ಹೊಳ್ಳ, ಪತ್ರಕರ್ತರಾದ ಶಿವಮೊಗ್ಗದ ಟೆಲೆಕ್ಸ್ ರವಿ, ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

36,534 ಮತದಾರರ ಹೆಸರು ಡಿಲೀಟ್; ಅಂತಿಮ ಪಟ್ಟಿಯಲ್ಲಿ 2.42 ಲಕ್ಷ ಮತದಾರರು

ನಾಗಠಾಣ ಕ್ಷೇತ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆ ಪೂರ್ಣ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ನಾಗಠಾಣ ವಿಧಾನಸಭಾ ಮತಕ್ಷೇತ್ರದಲ್ಲಿ ಮತದಾರರ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಪೂರ್ಣಗೊಂಡಿದ್ದು, ಅಂತಿಮ ಮತದಾರರ ಪಟ್ಟಿಯಲ್ಲಿ ಒಟ್ಟು 2,42,549 ಮತದಾರರು ಉಳಿದಿದ್ದಾರೆ. ಹಿಂದಿನ ಪಟ್ಟಿಯಲ್ಲಿದ್ದ 2,79,083 ಮತದಾರರ ಪೈಕಿ 36,534 ಮತದಾರರ ಹೆಸರುಗಳು ಅಂತಿಮ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ತಹಶೀಲ್ದಾರ್ ಸಂಜಯ ಇಂಗಳೆ ತಿಳಿಸಿದರು.

ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಐಆರ್ ಪ್ರಕ್ರಿಯೆಯ ವಿವಿಧ ಹಂತಗಳ ಕುರಿತು ಮಾಹಿತಿ ನೀಡಿದರು.

ಮೊದಲ ಹಂತದಲ್ಲಿ ಮತಗಟ್ಟೆ ಮಟ್ಟದ ಅಧಿಕಾ–ರಿಗಳು (ಬಿಎಲ್‌ಒ) ಹಾಗೂ ರಾಜಕೀಯ ಪಕ್ಷಗಳ ಮತಗಟ್ಟೆ ಮಟ್ಟದ ಏಜೆಂಟರು (ಬಿಎಲ್‌ಎ) ಪ್ರತಿ ಮತಗಟ್ಟೆ ವ್ಯಾಪ್ತಿಯಲ್ಲಿ ಮನೆಮನೆಗೆ ತೆರಳಿ ನಿಗದಿತ ಅರ್ಜಿ ನಮೂನೆಗಳನ್ನು ವಿತರಿಸಿದ್ದಾರೆ. ಎರಡನೇ ಹಂತದಲ್ಲಿ ಭರ್ತಿ ಮಾಡಿದ ನಮೂನೆಗಳನ್ನು ಪರಿಶೀಲಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಮೂರನೇ ಹಂತದಲ್ಲಿ ಸ್ವೀಕರಿಸಿದ ಆಕ್ಷೇಪಣೆಗಳನ್ನು ಸ್ಥಳಕ್ಕೆ ತೆರಳಿ ಪರಿಶೀಲಿಸಿ, ಅಗತ್ಯ ದಾಖಲೆಗಳನ್ನು (ಅಧಿಕೃತ ದಾಖಲೆಗಳಿಂದ ಪರಿಶೀಲಿಸಿ)ಪಡೆದು ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ ಎಂದು ವಿವರಿಸಿದರು.

ನಾಗಠಾಣ ಮತಕ್ಷೇತ್ರದ ಹಿಂದಿನ ಮತದಾರರ ಪಟ್ಟಿಯಲ್ಲಿ 1,42,096 ಪುರುಷರು, 1,36,975 ಮಹಿಳೆಯರು ಹಾಗೂ 12 ತೃತೀಯ ಲಿಂಗದ ಮತದಾರರು ಸೇರಿದಂತೆ ಒಟ್ಟು 2,79,083 ಮತದಾರರಿದ್ದರು. ಅಂತಿಮ ಪಟ್ಟಿಯಲ್ಲಿ 1,24,682 ಪುರುಷರು, 1,17,855 ಮಹಿಳೆಯರು ಹಾಗೂ 12 ತೃತೀಯ ಲಿಂಗದ ಮತದಾರರು ಸೇರಿ ಒಟ್ಟು 2,42,549 ಮತದಾರರು ಉಳಿದಿದ್ದಾರೆ ಎಂದು ತಿಳಿಸಿದರು.

ಚಡಚಣದಲ್ಲೂ 16,528 ಮತದಾರರ ಹೆಸರು ಕೈಬಿಡಲಾಗಿದೆ ಚಡಚಣ ಪಟ್ಟಣದ ಮತದಾರರ ಪಟ್ಟಿಯಲ್ಲಿಯೂ ಗಣನೀಯ ಬದಲಾವಣೆಯಾಗಿದೆ. ಹಿಂದಿನ ಪಟ್ಟಿಯಲ್ಲಿ 59,431 ಪುರುಷರು, 56,526 ಮಹಿಳೆಯರು ಹಾಗೂ 7 ತೃತೀಯ ಲಿಂಗದ ಮತದಾರರು ಸೇರಿದಂತೆ ಒಟ್ಟು 1,15,964 ಮತದಾರರಿದ್ದರು. ಅಂತಿಮ ಪಟ್ಟಿಯಲ್ಲಿ 51,556 ಪುರುಷರು, 47,872 ಮಹಿಳೆಯರು ಹಾಗೂ 8 ತೃತೀಯ ಲಿಂಗದ ಮತದಾರರು ಸೇರಿದಂತೆ ಒಟ್ಟು 99,436 ಮತದಾರರು ಉಳಿದಿದ್ದಾರೆ. ಹೀಗಾಗಿ ಚಡಚಣ ಪಟ್ಟಣದಲ್ಲಿ ಒಟ್ಟು 16,528 ಮತದಾರರ ಹೆಸರುಗಳು ಅಂತಿಮ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಸಂಜಯ ಇಂಗಳೆ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಚಡಚಣ ಬಿಜೆಪಿ ಮಂಡಲ ಅಧ್ಯಕ್ಷ ಕಾಂತುಗೌಡ ಪಾಟೀಲ, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಆರ್.ಡಿ. ಹಕ್ಕೆ, ಜೆಡಿಎಸ್ ಮುಖಂಡ ಭೀಮಾಶಂಕರ ವಾಳಿಖಿಂಡಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬೆಳೆ ಸಮೀಕ್ಷೆ ಎಲ್ಲದಕ್ಕೂ ಮೂಲಾಧಾರ: ಡಿಸಿ ಡಾ.ಆನಂದ ಕೆ.

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬೆಳೆ ಸಮೀಕ್ಷೆ ಎಲ್ಲದಕ್ಕೂ ಮೂಲಾಧಾರವಾಗಿದೆ. ಬೆಳೆ ಪರಿಹಾರ ಪಾವತಿ, ಬೆಳೆ ವಿಮೆ, ಪಹಣಿಯಲ್ಲಿ ಬೆಳೆ ನಮೂದು ಹಾಗೂ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಗೆ ಸೌಲಭ್ಯಗಳನ್ನು ಒದಗಿಸಲು ಬೆಳೆ ಸಮೀಕ್ಷೆಯ ಮಾಹಿತಿಯನ್ನು ಬಳಸಲಾಗುತ್ತದೆ. ಆದ್ದರಿಂದ ಸಮೀಕ್ಷೆಯನ್ನು ಸರಿಯಾಗಿ, ವಸ್ತುನಿಷ್ಠವಾಗಿ ಹಾಗೂ ನಿಖರವಾಗಿ ನಿರ್ವಹಿಸಿ, ಬೆಳೆಗಳ ವಿವರ ಮತ್ತು ವಿಸ್ತೀರ್ಣ ಸೇರಿದಂತೆ ಅಗತ್ಯ ಮಾಹಿತಿಯನ್ನು ಯಾವುದೇ ಲೋಪದೋಷಗಳಿಲ್ಲದೆ ದಾಖಲಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಸೂಚನೆ ನೀಡಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಕೃಷಿ ಅಂಕಿ–ಅಂಶಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಋತುಗಳಲ್ಲಿ ನಡೆಯುವ ಬೆಳೆ ಸಮೀಕ್ಷೆಯಲ್ಲಿ ಬೆಳೆ ವಿಸ್ತೀರ್ಣ, ಭೂಬಳಕೆ, ಛಾಯಾಚಿತ್ರ ಮತ್ತು ನೀರಾವರಿ ಮೂಲಗಳ ವಿವರಗಳನ್ನು ಸಮರ್ಪಕವಾಗಿ ದಾಖಲಿಸಬೇಕು. ಹಿಸ್ಸಾವಾರು ಗಡಿಗಳ ನವೀಕರಣಕ್ಕೆ ಆದ್ಯತೆ ನೀಡಬೇಕು. ಸಮೀಕ್ಷೆಯ ಮೇಲ್ವಿಚಾರಕರು ದಾಖಲಾದ ಮಾಹಿತಿಯನ್ನು ಪರಿಶೀಲಿಸಿ ಅನುಮೋದಿಸಬೇಕು. ಮಾಹಿತಿಯಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಮರು ಸಮೀಕ್ಷೆ ನಡೆಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಬೆಳೆ ಸಮೀಕ್ಷೆಯ ಆಧಾರದ ಮೇಲೆ ರೈತರಿಗೆ ಬೆಳೆ ಹಾನಿ ಪರಿಹಾರ ಹಾಗೂ ಬೆಳೆ ವಿಮೆ ಪಾವತಿ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಪಹಣಿಯಲ್ಲಿ ಬೆಳೆ ವಿವರಗಳನ್ನು ನಮೂದಿಸಲು ಮತ್ತು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಗೆ ಅನುಕೂಲ ಕಲ್ಪಿಸಲು ಈ ದತ್ತಾಂಶಗಳು ಪ್ರಮುಖವಾಗಿವೆ. ಹೀಗಾಗಿ ಸಮೀಕ್ಷೆ ನಡೆಸುವಾಗ ಜಮೀನಿನ ವಾಸ್ತವಿಕ ಬೆಳೆ ಸ್ಥಿತಿಯನ್ನು ಪರಿಶೀಲಿಸಿ ನಿಖರವಾಗಿ ದಾಖಲಿಸಬೇಕು. ಇದರಿಂದ ಅರ್ಹ ರೈತರಿಗೆ ಸೌಲಭ್ಯಗಳು ಸಮರ್ಪಕವಾಗಿ ತಲುಪಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕ್ರಾಪ್ ಮಿಸ್ ಮ್ಯಾಚ್ ಆಗದಂತೆ ನಿಗಾವಹಿಸಿ ರೈತರಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಿ ಜಿಲ್ಲಾಧಿಕಾರಿ ಸೂಚಿಸಿದರು.

ಜಿಲ್ಲೆಯಲ್ಲಿ ಶೇ.99.50ರಷ್ಟು ಮುಂಗಾರು ಬೆಳೆ ಸಮೀಕ್ಷೆ ಪ್ರಗತಿ: 2026–27ನೇ ಸಾಲಿನ ಮುಂಗಾರು ಬೆಳೆ ಸಮೀಕ್ಷೆಯಲ್ಲಿ ಜಿಲ್ಲೆ ಶೇ.99.50ರಷ್ಟು ಪ್ರಗತಿ ಸಾಧಿಸಿದೆ. ಒಟ್ಟು 6,31,663 ಸಬ್ ಸರ್ವೆ/ಹಿಸ್ಸಾಗಳ ಪೈಕಿ 6,28,474 ಸಬ್ ಸರ್ವೆ/ಹಿಸ್ಸಾಗಳ ಸಮೀಕ್ಷೆ ಪೂರ್ಣಗೊಳಿಸಿ ಅಪ್‌ಲೋಡ್ ಮಾಡಲಾಗಿದೆ. ಇನ್ನು 3,189 ಸಬ್ ಸರ್ವೆ/ಹಿಸ್ಸಾಗಳ ಸಮೀಕ್ಷೆ ಬಾಕಿ ಉಳಿದಿದೆ ಎಂದು ಕೃಷಿ ಜಂಟಿ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ವಿಜಯಪುರ ಉಪವಿಭಾಗಾಧಿಕಾರಿಗಳಾದ ಜುಫಿಶಾನ್ ಹಕ್, ತೋಟಗಾರಿಕಾ ಇಲಾಖಾ ಜಂಟಿ ನಿರ್ದೇಶಕರಾದ ಸಿದ್ರಾಮ ಬರಗಿಮಠ ಆರೋಗ್ಯಾಧಿಕಾರಿ ಮಲ್ಲನಗೌಡ ಪಾಟೀಲ, ಸಾಂಖ್ಯಿಕ ಇಲಾಖೆಯ ಸಹಾಯಕ ನಿರ್ದೇಶಕ ಆಲ್ತಾಫ ಮಣಿಯಾರ, ಸಹಾಯಕ ಸಾಂಖ್ಯಿಕ ಅಧಿಕಾರಿಗಳಾದ ಎಂ.ಡಿ. ಕುಲಕರ್ಣಿ, ಪರಮೇಶ ಕೆಂಚಣ್ಣವರ ಹಾಗೂ ಶ್ರೀಧರ ರಾಂಪೂರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

Printed by: AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR